Approved as a Text book by the Director of Public Instruction in Mysore, Bangalore.

भाषान्तरपाठः

प्रथमो भागः

BHASHANTHARA PATHA

(Sanskrit-Kannada)

PART I

BY

Vidwan N. RANGANATHA SHARMA

Asst. Prof. of Vyakarana

Sri Chamarajendra Sanskrit College

Bangalore-18.

1964

All Rights Reserved]

[Fifty Paise

भाषान्तरपाठः
(संस्कृत-कन्नड)
प्रथमो भागः

विद्वान् रङ्गनाथशर्मा
व्याकरणशास्त्राध्यापकः
श्रीचामराजेन्द्रसंस्कृतमहापाठशाला
बेङ्गलूरु

चतुर्थं मुद्रणम्

बेङ्गलूरु
प्रभा मुद्रणालये मुद्रापितम्

Exercises in Translation are admittedly a part of any course of Language Study. It is a necessary part of a course of Samskrita study, as it is a language not in daily use. Naturally, a certain standard of attainment in Translation is required of any candidate taking the Prathama or the Kavya Examination in Samskrita, or the S.S.L.C. Examination in General Educational systems. But text books were difficult to get as the First Book of Bhandarkar was prescribed. Sri N. Ranganatha Sharma came to the rescue of the students with his Bhashantara Patha, Part I, in 1948.

Since it was the outcome of his experience in the field for nearly two decades, the book proved very useful and it has now gone into another edition in an improved form.

I am sure this revised edition will prove of greater use to the student community.

I wish the author comes out with the second part of his Bhashantara Patha and helps the candidates for the Kavya and S.S.L.C. Examinations, in the near future.

Bangalore
19th Nov. 1964.

M. S. VENKATARAMANACHAR,
M.A., B.T.,
Chief Inspector of Samskrita Schools.

ನಿವೇದನೆ

ಸಂಸ್ಕೃತ ಭಾಷೆಯನ್ನು ಕಲಿಯುವ ಕನ್ನಡ ವಿದ್ಯಾರ್ಥಿಗಳಿಗೆ ಸಹಾಯವಾಗಲೆಂದು ಈ ಪುಸ್ತಕವನ್ನು ಬರೆಯಲಾಗಿದೆ. ಸಂಸ್ಕೃತ ಪ್ರಥಮ ಪರೀಕ್ಷೆಯ ಮತ್ತು ಸೆಕೆಂಡರಿ ಶಾಲೆಯ ವಿದ್ಯಾರ್ಥಿಗಳಿಗಾಗಿ ಈ ಪ್ರಯತ್ನವನ್ನು ಮಾಡಲಾಗಿದೆ. ಆದ್ದರಿಂದ ಬಾಲಕರ ಅರ್ಹತೆಯನ್ನು ಲಕ್ಷಿಸಿ ಅಭ್ಯಾಸಗಳನ್ನು ಆದಷ್ಟು ಚಿಕ್ಕದಾಗಿಯೂ, ವಾಕ್ಯಗಳನ್ನು ಸುಲಭವಾಗಿಯೂ ಮಾಡಿದೆ. ಸಾಧ್ಯವಾದ ಮಟ್ಟಿಗೆ ಪಠ್ಯನಿಯಮಾವಳಿಯನ್ನು ಅನುಸರಿಸಿಯೇ ವಾಕ್ಯಗಳನ್ನು ಜೋಡಿಸಲಾಗಿದೆ.

ಒಂದು ಭಾಷೆಯಲ್ಲಿ ಚೆನ್ನಾಗಿ ಪರಿಚಯವಾಗಬೇಕಾದರೆ—ಆ ಭಾಷೆಯು ನಮ್ಮ ಸ್ವಾಧೀನಕ್ಕೆ ಬರಬೇಕಾದರೆ—ಭಾಷಾಂತರ ಮಾಡುವುದು ಅತ್ಯಾವಶ್ಯಕ. ಅದಿಲ್ಲದೆ ಆ ಭಾಷೆಯಲ್ಲಿ ಉತ್ತಮಜ್ಞಾನವುಂಟಾಗಲಾರದು. ಅದರಲ್ಲಿಯೂ ವ್ಯವಹಾರದಲ್ಲಿಲ್ಲದ ಸಂಸ್ಕೃತಭಾಷೆಯ ಪರಿಚಯಕ್ಕೆ ಭಾಷಾಂತರವನ್ನು ಉಪೇಕ್ಷಿಸುವುದು ಸಾಧುವಲ್ಲ. ಆದುದರಿಂದ ಈ 'ಭಾಷಾಂತರಪಾಠ' ವನ್ನು ವಿದ್ಯಾರ್ಥಿಗಳಿಗೆ ಕ್ರಮವಾಗಿ ಬೋಧಿಸಬೇಕೆಂದು ಅಧ್ಯಾಪಕರಲ್ಲಿ ನನ್ನ ಸವಿನಯ ವಿಜ್ಞಾಪನೆ. ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ತರ್ಕಶಾಸ್ತ್ರದ ಪ್ರಾಧ್ಯಾಪಕರಾದ ಬ್ರ|ಶ್ರೀ| ಎಸ್. ವಿ. ಭೀಮಭಟ್ಟರು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 'ಬುಕ್ ಬ್ಯಾಂಕ್' ಒಂದನ್ನು ಉದಾರ ಬುದ್ಧಿಯಿಂದ ಸ್ಥಾಪಿಸಿದ್ದಾರೆ.

ಈ ನಾಲ್ಕನೆಯ ಮುದ್ರಣದ ಮಾರಾಟದಿಂದ ಬರುವ ಲಾಭವನ್ನು ಅದರ ನಿಧಿಗೆ ಅರ್ಪಿಸಿದ್ದೇನೆ.

ಬೆಂಗಳೂರು,
೧೬-೧೧-೧೯೬೪

ಗ್ರಂಥಕರ್ತ.

॥ श्रीः ॥

भाषान्तरपाठः

प्रथमो भागः

पीठिका

ಪೂರ್ಣವಾದ ಒಂದು ಅರ್ಥವನ್ನು ಕೊಡುವ ಶಬ್ದಗಳ ಗುಂಪಿಗೆ ವಾಕ್ಯವೆಂದು ಹೆಸರು. ಸಾಮಾನ್ಯವಾಗಿ ಒಂದು ವಾಕ್ಯದಲ್ಲಿ ಒಂದು ನಾಮಪದವೂ, ಒಂದು ಕ್ರಿಯಾಪದವೂ ಇರುತ್ತವೆ. ನಾಮಪದಕ್ಕೆ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳೆಂದು ಮೂರು ಲಿಂಗಗಳು ಇರುವುವು. ಆದರೆ ಇವು ಕನ್ನಡದಲ್ಲಿ ಇರುವಂತೆ ಸಂಸ್ಕೃತದಲ್ಲಿ ಇಲ್ಲ. ಹೇಗೆಂದರೆ, **करः**=ಕೈ ; ಇದು ಸಂಸ್ಕೃತದಲ್ಲಿ ಪುಲ್ಲಿಂಗ ; ಕನ್ನಡದಲ್ಲಿ ನಪುಂಸಕಲಿಂಗ. **शिला** = ಕಲ್ಲು ; ಇದು ಸಂಸ್ಕೃತದಲ್ಲಿ ಸ್ತ್ರೀಲಿಂಗ ; ಕನ್ನಡದಲ್ಲಿ ನಪುಂಸಕಲಿಂಗ. **मित्रम्** = ಸ್ನೇಹಿತ ; ಇದು ಸಂಸ್ಕೃತದಲ್ಲಿ ನಪುಂಸಕಲಿಂಗ ; ಕನ್ನಡದಲ್ಲಿ ಪುಲ್ಲಿಂಗ.

ಆದ್ದರಿಂದ ಈ ಲಿಂಗವಿಧಾನವನ್ನು ಅಮರಕೋಶದಿಂದ ತಿಳಿದುಕೊಳ್ಳಬೇಕು. ಅಭ್ಯಾಸಬಲದಿಂದ ಇದು ಸುಲಭವಾಗುವುದು.

ಸಂಸ್ಕೃತದಲ್ಲಿ ಕ್ರಿಯಾಪದಗಳಿಗೆ ಕನ್ನಡದಲ್ಲಿರುವಂತೆ ಲಿಂಗಭೇದವಿಲ್ಲ.

ಉದಾ :—

भवति = ಇರುತ್ತಾನೆ, ಇರುತ್ತಾಳೆ, ಇರುತ್ತದೆ.

वदति = ಹೇಳುತ್ತಾನೆ, ಹೇಳುತ್ತಾಳೆ, ಹೇಳುತ್ತದೆ.

ಏಕವಚನ, ದ್ವಿವಚನ, ಬಹುವಚನಗಳೆಂದು ಮೂರು ವಚನಗಳಿವೆ. ಒಂದು ಸಂಖ್ಯೆಯು ತೋರುವಾಗ ಏಕವಚನವನ್ನೂ, ಎರಡು ಸಂಖ್ಯೆಯು ತೋರುವಾಗ ದ್ವಿವಚನವನ್ನೂ, ಎರಡಕ್ಕಿಂತ ಹೆಚ್ಚು ಸಂಖ್ಯೆಯು ತೋರು

ವಾಗ ಬಹುವಚನವನ್ನೂ ಉಪಯೋಗಿಸಬೇಕು. ಪುರುಷಗಳನ್ನು ಈ ರೀತಿ ತಿಳಿಯಬೇಕು.—

೧. ಪ್ರ. ಪುರುಷ	**सः** = ಅವನು	**ते** = ಅವರು
	सा = ಅವಳು	**ताः** = ಅವರು
	तत् = ಅದು	**तानि** = ಅವು

ಹೀಗೆಯೇ **अयम्** = ಇವನು ಮೊದಲಾದ ಶಬ್ದಗಳು

೨. ಮಧ್ಯಮ ಪುರುಷ	**त्वम्** = ನೀನು
	यूयम् = ನೀವು

೩. ಉತ್ತಮ ಪುರುಷ	**अहम्** = ನಾನು
	वयम् = ನಾವು

ಸಂಸ್ಕೃತದಲ್ಲಿ ಒಟ್ಟು ಏಳು ವಿಭಕ್ತಿಗಳಿವೆ. ಅವುಗಳ ಅರ್ಥವನ್ನು ಕೆಳಗೆ ತೋರಿಸಿದೆ—

अकारान्तः पुल्लिङ्गो "राम" शब्दः—ರಾಮನು

	ಏಕವಚನ	ದ್ವಿವಚನ	ಬಹುವಚನ	ಏಕವಚನಾರ್ಥ
ಪ್ರ. ವಿಭಕ್ತಿ	**रामः**	**रामौ**	**रामाः**	ರಾಮನು
ಸಂ. ಪ್ರ. ವಿ.	**हे राम**	**हे रामौ**	**हे रामाः**	ಎಲೈ ರಾಮನೇ
ದ್ವಿತೀಯಾ	**रामम्**	**रामौ**	**रामान्**	ರಾಮನನ್ನು
ತೃತೀಯಾ	**रामेण**	**रामाभ्याम्**	**रामैः**	ರಾಮನಿಂದ
ಚತುರ್ಥೀ	**रामाय**	**रामाभ्याम्**	**रामेभ्यः**	ರಾಮನಿಗೆ
ಪಂಚಮೀ	**रामात्**	**रामाभ्याम्**	**रामेभ्यः**	ರಾಮನದೆಸೆಯಿಂದ
ಷಷ್ಠೀ	**रामस्य**	**रामयोः**	**रामाणाम्**	ರಾಮನ
ಸಪ್ತಮೀ	**रामे**	**रामयोः**	**रामेषु**	ರಾಮನಲ್ಲಿ

ಸೂಚನೆ :—ಯಾರನ್ನಾದರೂ ಉದ್ದೇಶಿಸಿ ಕರೆಯುವಾಗ ಸಂಬೋಧನ ಪ್ರಥಮಾವಿಭಕ್ತಿಯು ಬರುತ್ತದೆ. ಆಗ ಶಬ್ದದ ಹಿಂದೆ **हे** ಎಂಬ ಅವ್ಯಯವನ್ನು ಉಪಯೋಗಿಸುವುದು ವಾಡಿಕೆಯಾಗಿದೆ.

ಕೆಳಗೆ ಬರೆದ ಧಾತುವಿನ ರೂಪಗಳನ್ನೂ, ಅರ್ಥಗಳನ್ನೂ ಗಮನಿಸಿರಿ.

ಗಮ್ ಧಾತು=ಹೋಗು, ವರ್ತಮಾನಕಾಲ (**ಲಟ್**)

	ಏಕವಚನ	ದ್ವಿವಚನ	ಬಹುವಚನ
ಪ್ರ. ಪುರುಷ	**गच्छति** { ಹೋಗುತ್ತಾನೆ. / ಹೋಗುತ್ತಾಳೆ. / ಹೋಗುತ್ತದೆ.	**गच्छतः**	**गच्छन्ति**
ಮ. ಪುರುಷ	**गच्छसि**=ಹೋಗುತ್ತೀಯೆ.	**गच्छथः**	**गच्छथ**
ಉ. ಪುರುಷ	**गच्छामि**=ಹೋಗುತ್ತೇನೆ.	**गच्छावः**	**गच्छामः**

ಕ್ರಿಯಾಪದಗಳು ಯಾವಾಗಲೂ ಪ್ರಥಮಾವಿಭಕ್ತಿಯಲ್ಲಿರುವ ಶಬ್ದದೊಡನೆ ಅನ್ವಯಿಸುತ್ತವೆ. ಆ ಶಬ್ದವು ಯಾವ ವಚನ ಮತ್ತು ಪುರುಷಗಳಲ್ಲಿರುವುದೋ ಕ್ರಿಯಾಪದವೂ ಆ ವಚನ, ಪುರುಷಗಳಲ್ಲಿಯೇ ಇರಬೇಕು.

ಕೆಲಸವನ್ನು ಮಾಡತಕ್ಕವನಿಗೆ ಕರ್ತೃವೆಂದು ಹೆಸರು. ಕ್ರಿಯಾಪದವು ಕರ್ತೃಪದದೊಡನೆ ಅನ್ವಯಿಸುವುದಕ್ಕೆ "ಕರ್ತರಿಪ್ರಯೋಗ" ವೆಂದು ಹೇಳುತ್ತಾರೆ. ಕರ್ತರಿಪ್ರಯೋಗದಲ್ಲಿ ಕರ್ತೃಪದದ ಮೇಲೆ ಪ್ರಥಮಾವಿಭಕ್ತಿಯು ಬರುತ್ತದೆ.

೧. ವರ್ತಮಾನಕಾಲ; ಏಕವಚನ; ಪ್ರಥಮ ಪುರುಷ.

अभ्यासः १.

कर्णाटभाषया परिवर्तयत—

१. रामः गच्छति। २. भीमः धावति। ३. गोविन्दः वदति। ४. सीता नयति। ५. शारदा पठति। ६. अम्बा

पचति। ७. फलं पतति। ८. घृतं द्रवति। ९. शिष्यः नमति। १०. गजः चरति। ११. बालः पिबति। १२. काकः रटति। १३. बाला गायति। १४. सिंहः पश्यति। १५. चन्द्रः राजति। १६. पत्रं चलति। १७. वृषभः नदति।

अभ्यासः २.

संस्कृतभाषया परिवर्तयत—

೧. ರಾಮನು ಹೇಳುತ್ತಾನೆ. ೨. ಕೃಷ್ಣನು ಓದುತ್ತಾನೆ. ೩. ಮುಕುಂದನು ಹೋಗುತ್ತಾನೆ. ೪. ಸೀತೆಯು ಓಡುತ್ತಾಳೆ. ೫. ಹುಡುಗನು ಒಯ್ಯುತ್ತಾನೆ. ೬. ಗಂಗೆಯು ಅಡಿಗೆ ಮಾಡುತ್ತಾಳೆ. ೭. ತಾಯಿ ಕೊಡುತ್ತಾಳೆ. ೮. ಎಲೆಯು ಬೀಳುತ್ತದೆ. ೯. ಕಾಗೆಯು ಕುಡಿಯುತ್ತದೆ. ೧೦. ಸೂರ್ಯನು ಪ್ರಕಾಶಿಸುತ್ತಾನೆ. ೧೧. ರಾಜನು ಇರುತ್ತಾನೆ. ೧೨. ಮುಕುಂದನು ನೋಡುತ್ತಾನೆ. ೧೩. ರಮೆಯು ಹಾಡುತ್ತಾಳೆ. ೧೪. ಹರಿಯು ಮಾತನಾಡುತ್ತಾನೆ. ೧೫. ಹುಲ್ಲು ಅಲ್ಲಾಡುತ್ತದೆ. ೧೬. ಹುಡುಗನು ಬರೆಯುತ್ತಾನೆ. ೧೭. ಮರವು ಬೆಳೆಯುತ್ತದೆ.

೨. ವರ್ತಮಾನಕಾಲ; ದ್ವಿವಚನ; ಬಹುವಚನ.

अभ्यासः ३.

कर्णाटभाषया परिवर्तयत—

१. बालाः लिखन्ति। २. गिरयः तिष्ठन्ति। ३. कवयः वदन्ति। ४. नार्यः गच्छन्ति। ५. गजौ चरतः। ६. शिले पततः। ७. धेनू पिबतः। ८. वनानि भवन्ति। ९. मेघाः वर्षन्ति। १०. गुरवः पृच्छन्ति। ११. अश्वौ वहतः। १२. पितरौ नन्दतः। १३. गावौ धावतः। १४. मातरः यच्छन्ति। १५. भ्रातरः इच्छन्ति। १६. बालाः लिखन्ति। १७. जनाः हसन्ति।

अभ्यासः ४.

संस्कृतभाषया परिवर्तयत—

೧. ಜನರು ವಾಸಮಾಡುತ್ತಾರೆ. ೨. ಹುಡುಗರು ಓಡುತ್ತಾರೆ. ೩. ಕಪಿಗಳು ತಿನ್ನುತ್ತವೆ. ೪. (ಇಬ್ಬರು) ಹುಡುಗಿಯರು ಬರೆಯುತ್ತಾರೆ. ೫. (ಇಬ್ಬರು) ಮುನಿಗಳು ವಾಸಿಸುತ್ತಾರೆ. ೬. ಇಬ್ಬರು ಅಣ್ಣತಮ್ಮಂದಿರು ಓದುತ್ತಾರೆ. ೭. ಉಪಾಧ್ಯಾಯರು ಪ್ರವೇಶಿಸುತ್ತಾರೆ. ೮. ಮಕ್ಕಳು ನಮಸ್ಕರಿಸುತ್ತಾರೆ. ೯. ರಾಜರು ಕಾಪಾಡುತ್ತಾರೆ. ೧೦. ನಕ್ಷತ್ರಗಳು ಪ್ರಕಾಶಿಸುತ್ತವೆ. ೧೧. (ಎರಡು) ಪುಸ್ತಕಗಳು ಇವೆ. ೧೨. (ಇಬ್ಬರು) ಸ್ನೇಹಿತರು ಮಾತನಾಡುತ್ತಾರೆ. ೧೩. (ಇಬ್ಬರು) ಹೆಂಗಸರು ಕೇಳುತ್ತಾರೆ. ೧೪. ಕಪಿಗಳು ಎಸೆಯುತ್ತವೆ. ೧೫. ಕವಿಗಳು ಹೊಗಳುತ್ತಾರೆ. ೧೬. ಮುನಿಗಳು ಜಪಿಸುತ್ತಾರೆ.

೩. ವರ್ತಮಾನ ಕಾಲ.

ಮಧ್ಯಮ ಮತ್ತು ಉತ್ತಮ ಪುರುಷಗಳು

अभ्यासः ५.

कर्णाटभाषया परिवर्तयत—

१. त्वं पठसि। २. युवां लिखथः। ३. यूयं वदथ। ४. अहं गच्छामि। ५. आवां यच्छावः। ६. वयं धावामः। ७. युवां नमथः। ८. त्वं क्रीडसि। ९. यूयं जयथ। १०. आवां पिबावः। ११. वयं नन्दामः। १२. यूयं स्पृशथ। १३. अहं विशामि। १४. त्वं निन्दसि। १५. वयं पश्यामः।

अभ्यासः ६.

संस्कृतभाषया परिवर्तयत—

೧. ನೀನು ಹೇಳುತ್ತೀಯೆ. ೨. ನೀವಿಬ್ಬರು ವಾಸಿಸುತ್ತೀರಿ. ೩. ನೀವು ಬರೆಯುತ್ತೀರಿ. ೪. ನಾನು ಓಡುತ್ತೇನೆ. ೫. ನಾವಿಬ್ಬರು

ಕೇಳುತ್ತೇವೆ. ೬. ನಾವು ಹೋಗುತ್ತೇವೆ. ೭. ನೀವಿಬ್ಬರು ಬರೆಯುತ್ತೀರಿ. ೮. ನೀನು ನೋಡುತ್ತೀಯೆ. ೯. ನೀವು ಒಯ್ಯುತ್ತೀರಿ. ೧೦. ನಾವಿಬ್ಬರು ಹಾಡುತ್ತೇವೆ. ೧೧. ನಾನು ತಿನ್ನುತ್ತೇನೆ. ೧೨. ನೀವು ಅಡಿಗೆ ಮಾಡುತ್ತೀರಿ. ೧೩. ನಾನು ನಮಸ್ಕರಿಸುತ್ತೇನೆ. ೧೪. ನೀನು ಓದುತ್ತೀಯೆ. ೧೫. ನಾವು ಪ್ರವೇಶಿಸುತ್ತೇವೆ. ೧೬. ನೀವು ಬೀಳುತ್ತೀರಿ.

೪. ಭೂತಕಾಲ; ದ್ವಿತೀಯಾವಿಭಕ್ತಿ.

गम् ಧಾತು=ಹೋಗು. ಭೂತಕಾಲ (**लङ्**)

	ಏಕವಚನ	ದ್ವಿವಚನ	ಬಹುವಚನ
ಪ್ರ. ಪುರುಷ	**अगच्छत्**	**अगच्छताम्**	**अगच्छन्**
ಮ. ಪುರುಷ	**अगच्छः**	**अगच्छतम्**	**अगच्छत**
ಉ. ಪುರುಷ	**अगच्छम्**	**अगच्छाव**	**अगच्छाम**

ಈ ವಾಕ್ಯಗಳನ್ನು ಓದಿರಿ.—

१. **सः रामम् अपश्यत्** = ಅವನು ರಾಮನನ್ನು ನೋಡಿದನು.

२. **बालः क्षीरम् अपिबत्** = ಹುಡುಗನು ಹಾಲನ್ನು ಕುಡಿದನು.

ಈ ವಾಕ್ಯಗಳಲ್ಲಿ 'ನೋಡಿದನು, ಕುಡಿದನು' ಎಂಬ ಪದಗಳಮೇಲೆ 'ಯಾರನ್ನು, ಏನನ್ನು' ಎಂದು ಪ್ರಶ್ನೆ ಮಾಡಿದರೆ 'ರಾಮನನ್ನು, ಹಾಲನ್ನು' ಎಂದು ಉತ್ತರ ದೊರೆಯುವುದು. ಇದಕ್ಕೆ ಕರ್ಮಪದವೆಂದು ಹೆಸರು. ಈ ಕರ್ಮಪದಗಳು ದ್ವಿತೀಯಾವಿಭಕ್ತಿಯಲ್ಲಿರುವುವು. ಉದಾ :—

गजम् = ಆನೆಯನ್ನು **कपीन्** = ಕಪಿಗಳನ್ನು

सीताम् = ಸೀತೆಯನ್ನು **नारीः** = ಹೆಂಗಸರನ್ನು

जलम् = ನೀರನ್ನು **फलानि** = ಹಣ್ಣುಗಳನ್ನು

अभ्यासः ७.

कर्णाटभाषया परिवर्तयत—

१. रामः रावणमजयत् । २. हरिः लेखनीमयच्छत् । ३. शुकाः फलानि अखादन् । ४. रामलक्ष्मणौ वनमगच्छताम् । ५. सीता पुस्तकमानयत् । ६. कवयः काव्यानि अलिखन् । ७. वृषभौ गन्त्रीमवहताम् । ८. नृपः प्रजाः अरक्षत् । ९. बालाः पाठानपठन् । १०. शिशुः क्षीरमपिबत् । ११. अहं नारीः अपृच्छम् । १२. युवां गुरूननमतम् । १३. वयं नाटकमपश्याम । १४. यूयं धनमयच्छत । १५. पार्वती पितरौ अवदत् ।

अभ्यासः ८.

संस्कृतभाषया परिवर्तयत—

೧. ತಾಯಿಯು ಮಿಠಾಯಿಯನ್ನು [1] ಕೊಟ್ಟಳು. ೨. ಗೌರಿಯು ಹಾಲನ್ನು ಕುಡಿದಳು. ೩. ಕಪಿಗಳು ಹಣ್ಣುಗಳನ್ನು ನೋಡಿದವು. ೪. ಹಾವು ಕಪ್ಪೆಯನ್ನು [2] ತಿಂದಿತು. ೫. (ಎರಡು) ಇಲಿಗಳು ಬಿಲವನ್ನು ಹೊಕ್ಕವು. ೬. ಬ್ರಾಹ್ಮಣರು ವೇದವನ್ನು ಪಠಿಸಿದರು. ೭. ನಾನು ಹುಡುಗರನ್ನು ಕೇಳಿದೆನು. ೮. ನೀನು ಉತ್ತರವನ್ನು ಹೇಳಿದೆ. ೯. ನಾವು (ಎರಡು) ಕುದುರೆಗಳನ್ನು ನೋಡಿದೆವು. ೧೦. ನೀವು ಭಾರವನ್ನು ಹೊತ್ತಿರಿ. ೧೧. ಹಸುಗಳು ಹುಲ್ಲನ್ನು ತಿಂದವು. ೧೨. ಬೆಂಕಿಯು ಮನೆಯನ್ನು ಸುಟ್ಟಿತು. ೧೩. ಹುಡುಗರು ಕಲ್ಲುಗಳನ್ನು ಎಸೆದರು.[3] ೧೪. ಉಪಾಧ್ಯಾಯರು ಹುಡುಗರನ್ನು ಕೇಳಿದರು. ೧೫. ನಾವಿಬ್ಬರು ಶಾಲೆಗೆ ಹೋದೆವು.

---

[1] मोदकम् [2] भेकम् [3] अक्षिपन्

೫. ತೃತೀಯಾವಿಭಕ್ತಿ.

ಈ ವಾಕ್ಯಗಳನ್ನು ಓದಿರಿ.

೧. **सीता लेखन्या लिखति** = ಸೀತೆಯು ಲೇಖನಿಯಿಂದ ಬರೆಯುತ್ತಾಳೆ.

೨. **सूदः काष्ठेन पचति** = ಅಡಿಗೆಯವನು ಸೌದೆಯಿಂದ ಅಡಿಗೆ ಮಾಡುತ್ತಾನೆ.

ಇಲ್ಲಿ ಲೇಖನಿಯು ಬರೆಯುವುದಕ್ಕೂ, ಸೌದೆಯು ಅಡಿಗೆಮಾಡುವುದಕ್ಕೂ ಸಾಧನವಾಗಿದೆ. ಹೀಗೆ ಒಂದು ಕೆಲಸಮಾಡುವುದಕ್ಕೆ ಯಾವುದು ಸಾಧನವೋ ಅದಕ್ಕೆ ಕರಣವೆಂದು ಹೆಸರು. ಅದರ ಮೇಲೆ ತೃತೀಯಾವಿಭಕ್ತಿ ಬರುತ್ತದೆ.

ಈ ವಾಕ್ಯಗಳನ್ನು ಓದಿರಿ.

೧. **तन्तुना वस्त्रं भवति** = ನೂಲಿನಿಂದ ಬಟ್ಟೆಯಾಗುತ್ತದೆ.

೨. **मेघेन वृष्टिः भवति** = ಮೋಡದಿಂದ ಮಳೆ ಬರುತ್ತದೆ.

ಇಲ್ಲಿ ನೂಲು ಬಟ್ಟೆಗೂ, ಮೋಡವು ಮಳೆಗೂ ಕಾರಣವಾಗಿದೆ. ಈ "ಕಾರಣ" ಶಬ್ದಗಳ ಮೇಲೂ ತೃತೀಯಾವಿಭಕ್ತಿ ಬರುತ್ತದೆ. 'ಕರಣ' ಕ್ಕೂ 'ಕಾರಣ' ಕ್ಕೂ ಇರುವ ಭೇದವನ್ನು ಮುಂದೆ ತಿಳಿಯುವಿರಿ. ಕನ್ನಡದಲ್ಲಿ 'ಇಂದ' ಎಂಬ ವಿಭಕ್ತಿಪ್ರತ್ಯಯ ಬರುವ ಎಡೆಯಲ್ಲೆಲ್ಲಾ ಸಂಸ್ಕೃತದಲ್ಲಿ ತೃತೀಯಾವಿಭಕ್ತಿಯು ಬರುತ್ತದೆಯೆಂದು ತಿಳಿದುಕೊಂಡರೆ ಸಾಕು.

ಈ ವಾಕ್ಯಗಳನ್ನು ಓದಿರಿ.

೧. **रामः लक्ष्मणेन सह वसति** = ರಾಮನು ಲಕ್ಷ್ಮಣನೊಡನೆ ವಾಸಿಸುತ್ತಾನೆ.

೨. **वत्सः धेन्वा सह गच्छति** = ಕರು ಹಸುವಿನೊಡನೆ ಹೋಗುತ್ತದೆ.

ಇಲ್ಲಿರುವ **सह** ಎಂಬ ಅವ್ಯಯವು 'ಒಡನೆ, ಜೊತೆಯಲ್ಲಿ' ಎಂಬ ಅರ್ಥವನ್ನು ಕೊಡುತ್ತದೆ. **साकम्, सार्धम्** ಎಂಬ ಅವ್ಯಯಗಳಿಗೂ ಇದೇ ಅರ್ಥ. ಇವು ಯಾವ ಶಬ್ದಗಳಿಗೆ ಅನ್ವಯಿಸುತ್ತವೆಯೋ ಅವುಗಳ ಮೇಲೆ ತೃತೀಯಾವಿಭಕ್ತಿ ಬರುತ್ತದೆ.

च ಎಂಬ ಅವ್ಯಯವನ್ನು 'ಮತ್ತು' ಎಂಬ ಅರ್ಥದಲ್ಲಿ ಉಪಯೋಗಿಸುತ್ತಾರೆ. ಈ ಅರ್ಥಕ್ಕೆ 'ಸಮುಚ್ಚಯ' ಎಂದು ಹೆಸರು.

अभ्यासः ९.

कर्णाटभाषया परिवर्तयत—

१. बालाः कन्दुकेन क्रीडन्ति । २. कृषीवलाः हलैः कर्षन्ति । ३. रमेशः करेण अस्पृशत् । ४. गौरी लेखन्या अलिखत् । ५. वयं कुसुमैः देवमर्चामः । ६. रामः सीता च नावा नदीमतरताम् । ७. कृपणाः धनेन नन्दन्ति । ८. पित्रा सह पुत्राः अगच्छन् । ९. वत्सः मात्रा साकं जलमपिबत् । १०. त्वं सुखेन वसति । ११. भीमः कोपेन अवदत् । १२. यूयं विद्यया धनं विन्दथ । १३. नार्यः काष्ठैः अपचन् । १४. नृपः दयया प्रजाः रक्षति । १५. कार्पासेन वस्त्रं, ऊर्णया कम्बलं, तृणेन कटश्च भवन्ति । १६. क्षीरेण दधि नवनीतेन घृतञ्च भवतः ।

अभ्यासः १०.

संस्कृतभाषया परिवर्तयत—

೧. ಶಿಶುಪಾಲನು ಕೆಟ್ಟಮಾತುಗಳಿಂದ[1] ಕೃಷ್ಣನನ್ನು ನಿಂದಿಸಿದನು. ೨. ಜಂತುಗಳು ಗಾಳಿಯಿಂದ ಬದುಕುತ್ತವೆ. ೩. ಹೆಂಗಸರು ಹೂವುಗಳಿಂದ ಪೂಜಿಸುತ್ತಾರೆ. ೪. ಹುಡುಗರು ಮಿಠಾಯಿಗಳಿಂದ ಸಂತೋಷಿಸಿದರು. ೫.

---

[1] दुर्वचनैः

ನಾವು ಶ್ರಮದಿಂದ ಐಶ್ವರ್ಯವನ್ನು ಸಂಪಾದಿಸಿದೆವು[1]. ೬. ನೀನು ತಾಯಿಯೊಡನೆ ಹೋಗುತ್ತೀಯೆ. ೭. ಮಳೆಯಿಂದ ರೈತರು ಸಂತೋಷಿಸುತ್ತಾರೆ. ೮. ಹಕ್ಕಿಗಳು ಕೊಕ್ಕುಗಳಿಂದ[2] ತಿನ್ನುತ್ತವೆ. ೯. ಉಪಾಧ್ಯಾಯರು ವಿದ್ಯಾರ್ಥಿಗಳೊಡನೆ ಶಾಲೆಯನ್ನು ಪ್ರವೇಶಿಸಿದರು. ೧೦. ನಾಯಿಯಿಂದ ಉಪಕಾರವಾಗುತ್ತದೆ. ೧೧. ನೀವು ಶ್ರದ್ಧೆಯಿಂದ ಓದಿದಿರಿ. ೧೨. ನಾನು ಕಾಲುಗಳಿಂದ ಓಡುತ್ತೇನೆ. ೧೩. ಭಕ್ತರು ಭಕ್ತಿಯಿಂದ ಧ್ಯಾನ ಮಾಡುತ್ತಾರೆ. ೧೪. ನೂಲಿನಿಂದ ಬಟ್ಟೆಯಾಗುತ್ತದೆ. ೧೫. ರಾಮನು ಸೀತೆಯೊಡನೆ ಅಯೋಧ್ಯೆಯನ್ನು ಪ್ರವೇಶಿಸಿದನು. ೧೬. ಬಡಗಿಯು[3] ಆಯುಧದಿಂದ ಕೆತ್ತುತ್ತಾನೆ[4].

೬. ಚತುರ್ಥೀವಿಭಕ್ತಿ ; ಆಜ್ಞಾರ್ಥ.

೧. ಈ ವಾಕ್ಯಗಳನ್ನು ಓದಿರಿ.

१. **विप्राय गां यच्छति**=ಬ್ರಾಹ್ಮಣನಿಗೆ ಹಸುವನ್ನು ಕೊಡುತ್ತಾನೆ.

२. **बालकाय मोदकं यच्छति**=ಹುಡುಗನಿಗೆ ಮಿಠಾಯಿಯನ್ನು ಕೊಡುತ್ತಾನೆ.

ಇಲ್ಲಿ ಕೊಡಲ್ಪಡುವ ಹಸು ಬ್ರಾಹ್ಮಣನಿಗೂ, ಮಿಠಾಯಿಯು ಹುಡುಗನಿಗೂ ಸೇರುತ್ತದೆ. ಯಾರಿಗೆ ಸೇರಬೇಕೆಂದು ಎಂದರೆ ಯಾರ ಉದ್ದೇಶವಾಗಿ ಒಂದು ವಸ್ತುವನ್ನು ಕೊಡುತ್ತೇವೆಯೋ ಅವರಿಗೆ 'ಸಂಪ್ರದಾನ' ವೆಂದು ಹೆಸರು. ಇಂತಹ ಶಬ್ದಗಳ ಮೇಲೆ ಚತುರ್ಥೀವಿಭಕ್ತಿ ಬರುತ್ತದೆ.

೨. ಇವುಗಳನ್ನು ಓದಿರಿ.

१. **हरये कुप्यति**=ಹರಿಯ ಮೇಲೆ ಸಿಟ್ಟು ಮಾಡುತ್ತಾನೆ.

२. **धनिकाय असूयति**=ಹಣವಂತನ ಮೇಲೆ ಹೊಟ್ಟೆಕಿಚ್ಚು ಪಡುತ್ತಾನೆ.

३. **गुरवे द्रुह्यति**=ಗುರುವಿಗೆ ದ್ರೋಹಮಾಡುತ್ತಾನೆ.

---

[1] अविन्दाम [2] चञ्चुभिः [3] वर्धकिः [4] तक्षति

೪. **शत्रवे ईर्ष्यति**=ಶತ್ರುವನ್ನು ಈರ್ಷಿಸುತ್ತಾನೆ.

ಇಲ್ಲಿ ಸಿಟ್ಟು, ಹೊಟ್ಟೆಕಿಚ್ಚು, ದ್ರೋಹ, ಈರ್ಷ್ಯೆಗಳು ಯಾರಮೇಲೆ ಉಂಟಾಗಿವೆಯೋ ಅವರ ಹೆಸರನ್ನು ಹೇಳುವ ಶಬ್ದಗಳ ಮೇಲೆ ಚತುರ್ಥೀ ವಿಭಕ್ತಿ ಬಂದಿದೆ.

೩. ಇವುಗಳನ್ನು ಓದಿರಿ.

೧. **मुक्तये हरिं भजति**=ಮೋಕ್ಷಕ್ಕೋಸ್ಕರ ಹರಿಯನ್ನು ಭಜಿಸುತ್ತಾನೆ.

೨. **विद्याभ्यासाय शालां गच्छति**=ವಿದ್ಯಾಭ್ಯಾಸಕ್ಕಾಗಿ ಶಾಲೆಗೆ ಹೋಗುತ್ತಾನೆ.

ಇಲ್ಲಿ ಭಜಿಸುವುದು ಮೋಕ್ಷಕ್ಕಾಗಿ, ಹೋಗುವುದು ವಿದ್ಯಾಭ್ಯಾಸಕ್ಕಾಗಿ; ಆದ್ದರಿಂದ ಯಾವ ಉದ್ದೇಶಕ್ಕಾಗಿ ಒಂದು ಕೆಲಸವು ನಡೆಯುತ್ತದೆಯೋ ಅಂತಹ ಶಬ್ದಗಳ ಮೇಲೆ ಚತುರ್ಥೀವಿಭಕ್ತಿ ಬರುತ್ತದೆ.

೪. ಇವುಗಳನ್ನು ಓದಿರಿ.

೧. **गुरवे नमः**=ಗುರುಗಳಿಗೆ ನಮಸ್ಕಾರ.

೨. **प्रजाभ्यः स्वस्ति**=ಪ್ರಜೆಗಳಿಗೆ ಒಳ್ಳೆಯದು ಆಗಲಿ.

नमः, स्वस्ति ಎಂಬ ಶಬ್ದಗಳ ಯೋಗವಿದ್ದರೆ ಚತುರ್ಥೀವಿಭಕ್ತಿ ಬರುತ್ತದೆ.

೫. ಇವುಗಳನ್ನು ಓದಿರಿ.

೧. **ग्रामाय गच्छति**=ಹಳ್ಳಿಗೆ ಹೋಗುತ್ತಾನೆ.

೨. **गृहाय आगच्छति**=ಮನೆಗೆ ಬರುತ್ತಾನೆ.

ಅಥವಾ

೧. **ग्रामं गच्छति**=ಹಳ್ಳಿಗೆ ಹೋಗುತ್ತಾನೆ.

೨. **गृहमागच्छति**=ಮನೆಗೆ ಬರುತ್ತಾನೆ.

'ಹೋಗು ಅಥವಾ ಬರು' ಎಂಬ ಅರ್ಥದ ಧಾತುವಿನ ಯೋಗವಿದ್ದರೆ ಕರ್ಮಪದದ ಮೇಲೆ ಚತುರ್ಥೀವಿಭಕ್ತಿಯಾಗಲಿ, ದ್ವಿತೀಯಾವಿಭಕ್ತಿಯಾಗಲಿ ಬರುತ್ತದೆ.

गम् ಧಾತು-ಹೋಗು. ಆಜ್ಞಾರ್ಥ (**लोट्**)

	ಏಕವಚನ	ದ್ವಿವಚನ	ಬಹುವಚನ
ಪ್ರ. ಪುರುಷ	**गच्छतु, गच्छतात्**	**गच्छताम्**	**गच्छन्तु**
ಮ. ಪುರುಷ	**गच्छ, गच्छतात्**	**गच्छतम्**	**गच्छत**
ಉ. ಪುರುಷ	**गच्छानि**	**गच्छाव**	**गच्छाम**

ವಿ. ಸೂ.—गच्छतात् ಎಂಬುದು ಆಜ್ಞಾರ್ಥದಲ್ಲಿ ಬರುವುದಿಲ್ಲ. ಆಶೀರರ್ಥದಲ್ಲಿ ಮಾತ್ರ ಬರುತ್ತದೆ. ಹೀಗೆಯೇ ಉಳಿದ ಧಾತುಗಳಲ್ಲಿ '**तात्**' ಪ್ರತ್ಯಯ ಹೊಂದಿದ ರೂಪಗಳನ್ನೂ ಭಾವಿಸಬೇಕು.

अभ्यासः ११.

कर्णाटभाषया परिवर्तयत—

१. मृगाः आहाराय चरन्तु। २. जलमुचः सस्येभ्यः वृष्टिं वर्षन्तु। ३. भिषक् रोगिभ्यः औषधं यच्छतु। ४. हे परिव्राट्, भिक्षायै दयया आगच्छ। ५. धीमन्तः, परोपकाराय श्राम्यत। ६. विद्यार्थिन्, सत्यं वद; धर्मं चर। ७. मातृदेवो भव; पितृदेवो भव; अतिथिदेवो भव। ८. अहं सौख्याय ईश्वरं भजानि। ९. वयं श्रद्धया पाठं पठाम। १०. हे श्रीमन्तः, दरिद्रेभ्यः अन्नं वस्त्रं च यच्छत। ११. राजानः दुष्टेभ्यः कुप्यन्तु, शिष्टेभ्यः अभयं यच्छन्तु। १२. सेवकः

जलाहरणाय गच्छतु। १३. सीतारामाभ्यां नमः; जनेभ्यः स्वस्ति। १४. सूर्याचन्द्रमसौ जगद्धिताय राजताम्। १५. पितरौ पुत्रेभ्यः सन्मार्गं दिशताम्।

अभ्यासः १२.

संस्कृतभाषया परिवर्तयत—

೧. ರಾಮನು ಪಾಠಶಾಲೆಗೆ ಹೋಗಲಿ. ೨. ನೀವು 'ಗುರುಗಳಿಗೆ ನಮಸ್ಕಾರ' ಎಂದು ಹೇಳಿರಿ. ೩. ವೈದ್ಯರೇ, ಮಗುವಿಗೆ ಔಷಧವನ್ನು ಕೊಡಿರಿ. ೪. ನಾನು ಪೇಟೆಗೆ ವ್ಯಾಪಾರಕ್ಕಾಗಿ ಹೋಗಬೇಕು.[1] ೫. ನೀನು ಗೋವಿಂದನಿಗೆ ಪುಸ್ತಕವನ್ನು ಕೊಡು. ೬. ನಾವು ಪರೋಪಕಾರಕ್ಕಾಗಿ ಜೀವಿಸೋಣ. ೭. ಸ್ನೇಹಿತರಿಗೆ ರಹಸ್ಯವನ್ನು ಹೇಳು. ೮. ಕವಿಗಳು ಕೀರ್ತಿಗಾಗಿ ಕಾವ್ಯಗಳನ್ನು ಬರೆಯಲಿ. ೯. ಭಿಕ್ಷುಕರು ಕಾಳಿಗಾಗಿ ಹಳ್ಳಿಯಿಂದ ಹಳ್ಳಿಗೆ ಹೋಗಲಿ. ೧೦. ಹನುಮಂತನು ಸೀತಾದರ್ಶನಕ್ಕಾಗಿ ಸಮುದ್ರವನ್ನು ದಾಟಲಿ. ೧೧. ನೀವಿಬ್ಬರು ವಿದ್ಯಾಭ್ಯಾಸಕ್ಕಾಗಿ ಪ್ರಯತ್ನಿಸಿರಿ.[2] ೧೨. ಶಕ್ತಿಗೋಸ್ಕರ ಹಾಲನ್ನು ಕುಡಿಯಿರಿ. ೧೩. ಮುಕ್ತಿಗಾಗಿ ದೇವರನ್ನು ಭಜಿಸಿರಿ. ೧೪. ಗೋವುಗಳಿಗೆ ಹಿತವನ್ನು ಬಯಸಿರಿ. ೧೫. ಸ್ವದೇಶಕ್ಕಾಗಿ ಸುಖವನ್ನೂ, ಐಶ್ವರ್ಯವನ್ನೂ ತ್ಯಜಿಸೋಣ.

೭. ಪಂಚಮೀ ಮತ್ತು ಷಷ್ಠೀವಿಭಕ್ತಿಗಳು.

ಈ ವಾಕ್ಯಗಳನ್ನು ಓದಿರಿ.

१. **अजः वृकात् त्रस्यति**=ಮೇಕೆಯು ತೋಳದ ದೆಸೆಯಿಂದ ಹೆದರುತ್ತದೆ.

२. **गङ्गा हिमालयात् प्रभवति** = ಗಂಗಾನದಿಯು ಹಿಮಾಲಯದಿಂದ ಹುಟ್ಟುತ್ತದೆ.

---

[1] गच्छानि [2] प्रयस्तम्

३. पान्थं चोरात् रक्षति=ಪ್ರಯಾಣಿಕನನ್ನು ಕಳ್ಳನದೆಸೆಯಿಂದ ರಕ್ಷಿಸುತ್ತಾನೆ.

४. वृक्षात् फलं पतति=ಮರದಿಂದ ಹಣ್ಣು ಬೀಳುತ್ತದೆ.

५. रत्नं काचात् भिन्नम्=ರತ್ನವು ಗಾಜಿಗಿಂತ ಬೇರೆಯಾದದ್ದು.

६. वैशाखात् चैत्रः पूर्वः=ವೈಶಾಖಕ್ಕಿಂತ ಚೈತ್ರಮಾಸವು ಮೊದಲನೆಯದು.

७. नगराद्दूरे वनम्=ಪಟ್ಟಣಕ್ಕೆ ದೂರದಲ್ಲಿ ವನವಿದೆ.

८. गोविन्दः आलस्यात् न पठति = ಗೋವಿಂದನು ಸೋಮಾರಿತನದಿಂದ ಓದುವುದಿಲ್ಲ.

ಮೇಲೆ ಪಂಚಮೀವಿಭಕ್ತಿಯು ಮುಖ್ಯವಾಗಿ ಬರುವ ಉದಾಹರಣೆಗಳನ್ನೂ ಕೊಟ್ಟಿದೆ. ಪ್ರಯೋಗಾನುಸಾರವಾಗಿ ಕನ್ನಡದಲ್ಲಿ ಪಂಚಮೀವಿಭಕ್ತಿಯ ಅರ್ಥವನ್ನು ಬೇರೆ ಬೇರೆ ರೂಪಗಳಲ್ಲಿ ಬರೆಯಲಾಗಿದೆ. ಈ ವಿಭಕ್ತಿಯ ವ್ಯಾಕರಣ ನಿಯಮವು ಕಠಿಣವೂ, ವಿಸ್ತಾರವೂ ಆದದ್ದರಿಂದ ಅದನ್ನು ಇಲ್ಲಿ ತಿಳಿಸಿಲ್ಲ. ಆದರೂ ಕೆಳಗೆ ಬರೆದ ವಿಷಯವನ್ನು ಮನದಟ್ಟು ಮಾಡಿಕೊಂಡರೆ ಇದು ಸುಲಭವಾಗುವುದು.

೧. 'ಹೆದರು—ಭಯಪಡು' ಎಂಬ ಅರ್ಥದ ಪದವಿದ್ದರೆ ಯಾರಿಂದ ಹೆದರಿಕೆಯಾಗುವುದೋ ಆ ಶಬ್ದದ ಮೇಲೆ ಪಂಚಮೀವಿಭಕ್ತಿ ಬರುವುದು.

೨. ಕನ್ನಡದಲ್ಲಿ ತೃತೀಯಾವಿಭಕ್ತಿಯಲ್ಲಿಯೂ, ಪಂಚಮೀವಿಭಕ್ತಿಯಲ್ಲಿಯೂ 'ಇಂದ' ಎಂಬ ಪ್ರತ್ಯಯವನ್ನು ಸೇರಿಸುತ್ತಾರೆ. 'ದೆಸೆಯಿಂದ' ಎಂಬ ಪಂಚಮೀವಿಭಕ್ತಿಯ ಉಪಯೋಗವು ಈಗ ಬಹಳ ಕಡಿಮೆಯಾಗಿದೆ. ತೃತೀಯಾವಿಭಕ್ತಿಯು 'ಕರಣ' ಶಬ್ದಗಳ ಮೇಲೆ ಬರುವುದೆಂದು ಹಿಂದೆ ಓದಿರುವಿರಿ. ಈ ಕರಣವಾಚಕಶಬ್ದಗಳನ್ನು ಬಿಟ್ಟು 'ಇಂದ' ಪ್ರತ್ಯಯವು

ಕನ್ನಡದಲ್ಲಿ ಎಲ್ಲೆಲ್ಲಿ ಬರುವುದೋ ಅಲ್ಲಿ ಸಂಸ್ಕೃತದಲ್ಲಿ ಪಂಚಮೀವಿಭಕ್ತಿ ಬರುವುದು. ಕಾರಣವಾಚಕಶಬ್ದಗಳ ಮೇಲೆ ತೃತೀಯಾ ಮತ್ತು ಪಂಚಮೀ ವಿಭಕ್ತಿಗಳೆರಡೂ ಬರಬಹುದು.

೩. 'ಅದಕ್ಕಿಂತ, ಅವನಿಗಿಂತ' ಈ ಮಾದರಿಯ ಅರ್ಥವನ್ನು ಕೊಡುವಾಗ ಪಂಚಮೀವಿಭಕ್ತಿ ಬರುವುದು.

ಇವುಗಳನ್ನು ಓದಿರಿ.

१. **रामस्य गृहम्** = ರಾಮನ ಮನೆ.

२. **दशरथस्य पुत्रः** = ದಶರಥನ ಮಗ.

३. **कृष्णस्य भार्या** = ಕೃಷ್ಣನ ಹೆಂಡತಿ.

४. **कालिदासस्य कविता** = ಕಾಳಿದಾಸನ ಕವಿತೆ.

५. **नृपस्य आज्ञा** = ರಾಜನ ಆಜ್ಞೆ.

ಎರಡು ಪದಾರ್ಥಗಳಿಗಿರುವ ಪರಸ್ಪರ ಸಂಬಂಧವನ್ನು ತೋರಿಸುವಾಗ ಷಷ್ಠೀವಿಭಕ್ತಿಯು ಬರುತ್ತದೆ.

धृतराष्ट्रस्य शतं पुत्राः अभवन् = ಧೃತರಾಷ್ಟ್ರನಿಗೆ ನೂರು ಮಕ್ಕಳಿದ್ದರು.

ಇಲ್ಲಿ **'धृतराष्ट्रस्य'** ಎಂಬುದು ಷಷ್ಠೀವಿಭಕ್ತಿಯಲ್ಲಿದ್ದರೂ ಕನ್ನಡದಲ್ಲಿ ಪ್ರಯೋಗಾನುಸಾರವಾಗಿ 'ಧೃತರಾಷ್ಟ್ರನಿಗೆ' ಎಂದು ಚತುರ್ಥೀವಿಭಕ್ತ್ಯಂತವಾಗಿ ಭಾಷಾಂತರಿಸಿರುವುದನ್ನು ಗಮನಿಸಿರಿ.

अभ्यासः १३.

कर्णाटभाषया परिवर्तयत—

१. सूर्यस्य उदयात् पक्षिणः तुष्यन्ति। २. तडागस्य जलं हरिणाः अपिबन्। ३. चोराः रक्षिभ्यः त्रस्यन्ति।

४. वृक्षस्य शाखाभ्यः फलानि अपतन्। ५. भूपालाः प्रजानां हितमिच्छन्तु। ६. आतपात् तप्तः गजः नदीं विशति। ७. विन्ध्यात् नर्मदातपत्यौ प्रभवतः। ८. चलच्चित्रस्य प्रेक्षणाय नारीणां सङ्घः अमिलत्। ९. गोपालः व्याघ्रात् गाः अरक्षत्। १०. वयमालस्यात् दरिद्रतामविन्दाम। ११. दशरथस्य चत्वारः पुत्राः अभवन्। १२. भारतदेशस्य कीर्तिः दिक्षु प्रसरतु। १३. कार्पण्यात् यूयं अपकीर्तिं विन्दथ। १४. चन्द्रिकायाः वयं नन्दामः। १५. नारदः स्वर्गात् भूलोकमागच्छत्।

अभ्यासः १४.

संस्कृतभाषया परिवर्तयत—

೧. ಹನುಮಂತನಿಂದ ರಾಕ್ಷಸರು ಹೆದರಿದರು. ೨. ಬೃಹಸ್ಪತಿಯು ದೇವತೆಗಳ ಗುರುವಾಗಿದ್ದಾನೆ. ೩. ಬಳ್ಳಿಯಿಂದ ಹೂವುಗಳು ಉದುರಿದವು[1]. ೪. ಸಮುದ್ರದ ನೀರು ಉಪ್ಪಾಗಿರುತ್ತದೆ. ೫. ಶಾಲೆಯಿಂದ ನಾವು ಬರುತ್ತೇವೆ. ೬. ಹಸುಗಳು ಹುಲಿಗೆ ಹೆದರುತ್ತವೆ. ೭. ಅತಿವೃಷ್ಟಿಯಿಂದ ಬೆಳೆಗಳು ನಾಶವಾದುವು. ೮. ಕೈಕೇಯಿಯು ದೆಸೆಯಿಂದ ರಾಮನು ಕಾಡಿಗೆ ಹೋದನು. ೯. ರಾಜನ ಆಜ್ಞೆಯಿಂದ ಜನರು ಸಂತೋಷಗೊಂಡರು. ೧೦. ಎಲೈ, ಜನರೆ, ದೇವರಿಗೆ ಭಯಪಡಿರಿ. ೧೧. ಗಾಳಿಯಿಂದ ಮರದ ಕೊಂಬೆಗಳು ಅಲ್ಲಾಡಿದವು. ೧೨. ಔರಂಗಜೇಬನ ನಡತೆಯು[2] ಶಿವಾಜಿಯನ್ನು ನೋಯಿಸಿತು. ೧೩. ಅಧಿಕಾರಿಗಳು ಕಳ್ಳರ ಗುಂಪನ್ನು ನೋಡಿದರು. ೧೪. ಸೂರ್ಯನಿಂದ ಪ್ರಾಣಿಗಳು ಜೀವಿಸುತ್ತವೆ. ೧೫. ಹಿಮಾಲಯದಿಂದ ಗಂಗಾನದಿಯು ಹುಟ್ಟುತ್ತದೆ.

---

[1] अगलन् [2] वर्तनम्

៤. ಸಪ್ತಮೀವಿಭಕ್ತಿ ; ವಿಧ್ಯರ್ಥ (ವಿಧಿಲಿಙ್)

ಈ ವಾಕ್ಯಗಳನ್ನು ಓದಿರಿ.

१. कासारे सरोजानि रोहन्ति=ಕೊಳದಲ್ಲಿ ತಾವರೆ ಹೂಗಳು ಬೆಳೆಯುತ್ತವೆ.

२. वनेषु व्याघ्राः वसन्ति=ಕಾಡುಗಳಲ್ಲಿ ಹುಲಿಗಳು ವಾಸಿಸುತ್ತವೆ.

ತಾವರೆಗಳು ಬೆಳೆಯುವುದಕ್ಕೆ ಕೊಳವೂ, ಹುಲಿಗಳ ವಾಸಕ್ಕೆ ಕಾಡುಗಳೂ ಆಧಾರವಾಗಿವೆ. ಇವಕ್ಕೆ 'ಅಧಿಕರಣ' ಎಂದು ಹೆಸರು. ಇಂತಹ ಶಬ್ದಗಳ ಮೇಲೆ ಸಪ್ತಮೀವಿಭಕ್ತಿ ಬರುತ್ತದೆ.

गम् ಧಾತು=ಹೋಗು ; ವಿಧ್ಯರ್ಥ (**विधिलिङ्**)

	ಏಕವಚನ	ದ್ವಿವಚನ	ಬಹುವಚನ
ಪ್ರ. ಪುರುಷ	**गच्छेत्**	**गच्छेताम्**	**गच्छेयुः**
ಮ. ಪುರುಷ	**गच्छेः**	**गच्छेतम्**	**गच्छेत**
ಉ. ಪುರುಷ	**गच्छेयम्**	**गच्छेव**	**गच्छेम**

ಸೂಚನೆ—ಆಜ್ಞಾರ್ಥದಲ್ಲಿಯೂ, ವಿಧ್ಯರ್ಥದಲ್ಲಿಯೂ ಧಾತುಗಳು ಬೇರೆ ಬೇರೆ ರೂಪವನ್ನು ಹೊಂದುತ್ತವೆ. ಆದರೆ ಇವುಗಳಿಗೆ ಹೆಚ್ಚು ಅರ್ಥ ಭೇದವಿಲ್ಲ. ಮುಖ್ಯವಾಗಿ ಆಜ್ಞೆ, ಅನುಮತಿ, ಸತ್ಕಾರ, ಪ್ರಾರ್ಥನೆಗಳಲ್ಲಿ ಇವೆರಡೂ ಬರುವುವು.

अभ्यासः १५.

कर्णाटभाषया परिवर्तयत—

१. विद्यार्थिनः संस्कृतभाषायां वदेयुः । २. पथिकाः वीथ्याः वामपार्श्वे गच्छेयुः । ३. त्वं शुचीनि वस्त्राणि धरेः ।

४. पुत्रकाः, शालायामुपाध्यायान् नमेत। ५. वयस्यौ, आसनयोः उपविशेतम्। ६. धनी दरिद्रेभ्यः धनं यच्छेत्। ७. वयं गृहे पत्रं लिखेम। ८. त्वं भानुवासरे आगच्छेः। ९. हिन्दवः महम्मदीयाश्च भारतदेशे सोदरप्रीत्या वसेयुः। १०. विद्वांसः, ग्रन्थेषु सन्मार्गदर्शकं विषयं लिखेत। ११. सुहृदः, वस्त्रक्षालनाय नदीं गच्छेम। १२. केशव, मसीधान्यां मसीं क्षिपेः। १३. बालाः, कक्ष्यायां यूयं विनीताः भवेत। १४. भगवन्, दयया भक्तान् रक्षेः। १५. गौरि, शारदे, युवां सभायां गायेतम्। १६. अहं प्रातःकाले शालायामुपस्थितो भवेयम्।

अभ्यासः १६.

संस्कृतभाषया परिवर्तयत—

೧. ನೀವು ನದಿಯಲ್ಲಿ ಸ್ನಾನಮಾಡಿರಿ. ೨. (ಇಬ್ಬರು) ಬಾಗಿಲು ಕಾಯುವವರು ಬಾಗಿಲಲ್ಲಿ ನಿಂತುಕೊಳ್ಳಲಿ. ೩. ನಕ್ಷತ್ರಗಳು ಆಕಾಶದಲ್ಲಿ ಹೊಳೆಯಲಿ. ೪. ನಾವು ಉಪನಿಷತ್ತನ್ನು ಪಠಿಸೋಣ. ೫. ನೀನು ಜೋಡುಗಳನ್ನು[1] ಹಾಕಿಕೊಳ್ಳಬೇಕು. ೬. ದಾರಿಯಲ್ಲಿ ನೀವು ಜಾಗರೂಕರಾಗಿರಿ. ೭. ಸೂರ್ಯನ ಬೆಳಕಿನಲ್ಲಿ ಗಿಡಗಳು ಬೆಳೆಯಲಿ. ೮. ರಾಜನಿಗೆ ಪ್ರಜೆಗಳಲ್ಲಿ ಕರುಣೆಯಿರಬೇಕು. ೯. ಅವರ ವಿಷಯದಲ್ಲಿ[2] ವಾತ್ಸಲ್ಯವುಳ್ಳವನೂ ಆಗಿರಬೇಕು. ೧೦. ರಾಜನಲ್ಲಿ ಪ್ರಜೆಗಳು ವಿಧೇಯರಾಗಿರಬೇಕು. ೧೧. ಕವಿಗಳೇ, ಪರಮಾತ್ಮನ ಮಹಿಮೆಯನ್ನು ಹೊಗಳಿರಿ. ೧೨. ಪ್ರಜೆಗಳೇ, ಮಾತೃಭೂಮಿಯಲ್ಲಿ ಭಕ್ತಿಯೂ, ಆದರವೂ ಇರಲಿ. ೧೩. ನಾವು ಸತ್ಯವನ್ನು ಹೇಳೋಣ; ಧರ್ಮವನ್ನು ಆಚರಿಸೋಣ. ೧೪. ರೋಗಿಯು

[1] उपानहौ [2] तासु

ಔಷಧವನ್ನು ಕುಡಿಯಬೇಕು. ೧೫. ವಿದ್ಯಾರ್ಥಿಗಳು ಸೂರ್ಯನು ಹುಟ್ಟುವುದಕ್ಕಿಂತ ಮುಂಚೆ ಏಳಬೇಕು. ೧೬. ನೀವಿಬ್ಬರು ಪಾಠವನ್ನು ಬರೆಯಿರಿ.

೯. ಅವ್ಯಯಗಳು

ಕೆಲವು ಶಬ್ದಗಳು ಲಿಂಗ, ವಚನ, ವಿಭಕ್ತಿಗಳಿಗೆ ಸಂಬಂಧಿಸಿದ ಯಾವ ವಿಕಾರವನ್ನೂ ಹೊಂದದೆ ಯಾವಾಗಲೂ ಒಂದೇ ವಿಧವಾಗಿರುತ್ತವೆ. ಅವುಗಳಿಗೆ ಅವ್ಯಯಗಳೆಂದು ಹೆಸರು.

ಇದು ಅವ್ಯಯ ಲಕ್ಷಣವನ್ನು ಹೇಳುವ ಶ್ಲೋಕ—

सदृशं त्रिषु लिङ्गेषु सर्वासु च विभक्तिषु ।
वचनेषु च सर्वेषु यन्नव्येति तदव्ययम् ॥

ಕೆಲವು ಮುಖ್ಯವಾದ ಅವ್ಯಯಗಳನ್ನು ಅರ್ಥಸಹಿತವಾಗಿ ಇಲ್ಲಿ ಕೊಟ್ಟಿದೆ.—

अन्तः=ಒಳಗೆ
बहिः=ಹೊರಗೆ
प्रातः=ಬೆಳಿಗ್ಗೆ
दिवा=ಹಗಲಿನಲ್ಲಿ
सायं=ಸಾಯಂಕಾಲದಲ್ಲಿ
नक्तम्=ರಾತ್ರಿಯಲ್ಲಿ
पुनः=ಮರಳಿ, ಪುನಃ
शनैः=ಮೆಲ್ಲಗೆ
ह्यः=ನಿನ್ನೆ
श्वः=ನಾಳೆ
अद्य=ಈ ದಿನ
चिरम्=ಬಹಳ ಹೊತ್ತು
तूष्णीम्=ಸುಮ್ಮನೆ
स्वयम्=ತಾನು
वृथा=ವ್ಯರ್ಥವಾಗಿ
न=ನಿಷೇಧ (ಇಲ್ಲ)
मा=ನಿಷೇಧ (ಬೇಡ) (ಇದನ್ನು ಆಜ್ಞಾರ್ಥದಲ್ಲಿ ಉಪಯೋಗಿಸುತ್ತಾರೆ)
च=ಮತ್ತು
वा=ಅಥವಾ
एवम्=ಹೀಗೆ
इत्थम्=ಈ ರೀತಿಯಲ್ಲಿ
अथ=ಆಮೇಲೆ

एकदा=ಒಮ್ಮೆ

तदा=ಆಗ

सदा=ಯಾವಾಗಲೂ

रे=ಎಲೈ (ಇದನ್ನು ನೀಚಾರ್ಥ ದಲ್ಲಿ ಉಪಯೋಗಿಸಬೇಕು)

इदानीं=ಈಗ

सह, साकम्, सार्धम् } ಜೊತೆಗೆ, ಜೊತೆಯಲ್ಲಿ

अपि=ಕೂಡ

अत्र=ಇಲ್ಲಿ

कुत्र=ಎಲ್ಲಿ ?

ततः=ಅನಂತರ

तथा=ಹಾಗೆ

सर्वथा=ಎಲ್ಲಾ ವಿಧ ದಲ್ಲಿಯೂ, ಹೇಗಾದರೂ

हे=ಎಲೈ

भोः=ಎಲೈ (ಇದನ್ನು ಗೌರವಾರ್ಥದಲ್ಲಿ ಮಾತ್ರ ಉಪಯೋಗಿಸಬೇಕು)

कदा=ಯಾವಾಗ ?

तदानीं=ಆಗ

पुरा=ಪೂರ್ವದಲ್ಲಿ

अलं=ಬೇಡ (ನಿಷೇಧ)

इति=ಹೀಗೆಂಬ, ಈ ರೀತಿ

उपरि=ಮೇಲೆ

तत्र=ಅಲ್ಲಿ

अतः=ಆದ್ದರಿಂದ

कुतः=ಏಕೆ ?

कथम्=ಹೇಗೆ ?

सम्यक्=ಚೆನ್ನಾಗಿ

इव=ಅಂತೆ, ಹಾಗೆ

एव ಎಂಬುದು ಅವಧಾರಣೆಯನ್ನು ಬೋಧಿಸುತ್ತದೆ. ಉದಾ :—

१. **अहमेव**=ನಾನೇ. **वदत्येव**=ಹೇಳಿಯೇ ತೀರುತ್ತಾನೆ.

चित्, **चन** ಇವು **किम्** ಶಬ್ದದ ಮುಂದೆ ಬಂದು ಅದರ ಅರ್ಥವನ್ನು ಮಾರ್ಪಡಿಸುವುವು. ಉದಾ :—

कश्चित्=ಒಬ್ಬಾನೊಬ್ಬ   **काञ्चन**=ಒಬ್ಬಳನ್ನು

अभ्यासः १७.

कर्णाटभाषया परिवर्तयत—

१. गौरी गृहस्य अन्तः अभवत्। २. उद्यानस्य बहिः अन्तश्च आम्रवृक्षाः अरोहन्। ३. यूयं प्रातः सायं च पुष्पाणि आनयत। ४. आकाशे नक्षत्राणि नक्तं राजन्ति; दिवा कुत्र भवन्ति? ५. वयं पुनः ग्रामं गच्छामः। ६. महिषाः शनैः चरन्ति; वृषभास्तु शीघ्रम्। ७. अहं ह्यः चलच्चित्रमपश्यम्। ८. श्वः मात्रे पत्रं लिख। ९. पाण्डवाः वने चिरमवसन्। १०. गौरी गायति; यूयं तूष्णीं भवत। ११. भोजः स्वयं पत्रमलिखत्। १२. छात्राः, कालं वृथा मा नयत। १३. मलिनं जलं न पिबेत्। १४. अलं विषादेन[1]; गुरोराशिषा विपन्नश्यति। १५. पुरा कालिदास इति महाकविरभवत्।

अभ्यासः १८.

संस्कृतभाषया परिवर्तयत—

೧. ಅಮ್ಮಾ, ರಾಮನೊಡನೆ ನಾನೂ ಈಗ ಹೋಗುತ್ತೇನೆ. ೨. ಲಕ್ಷ್ಮಣನು ಸುಮಿತ್ರೆಗೆ ಹೀಗೆ ಹೇಳಿದನು. ೩. ಬ್ರಹ್ಮನು ಹೇಗೆ ಪ್ರಪಂಚವನ್ನು ಸೃಷ್ಟಿಸಿದನು? ೪. ಏತಕ್ಕೆ ನೀನು ಅಣ್ಣನನ್ನು ನಿಂದಿಸುತ್ತೀಯೆ? ೫. ಮಗು, ನೀನು ಎಲ್ಲಿ ಬಿದ್ದೆ? ೬. ಆಮೇಲೆ ಹೇಗೆ ನೀನು ಮನೆಗೆ ಬಂದೆ? ೭. ಆದ್ದರಿಂದ ರಾತ್ರಿಯಲ್ಲಿ ಎಚ್ಚರಿಕೆಯಿಂದ ಸಂಚರಿಸ

---

[1] ಅಲಂ ಶಬ್ದದ ಯೋಗವಿದ್ದಲ್ಲಿ ಯಾವುದು ನಿಷೇಧಿಸಲ್ಪಡುತ್ತದೆಯೋ ಆ ಶಬ್ದದ ಮೇಲೆ ತೃತೀಯಾವಿಭಕ್ತಿ ಬರುತ್ತದೆ.

*

ಬೇಕು. ೮. ಒಮ್ಮೆ ನಾನು ಕಾಡಿನಲ್ಲಿ ಹುಲಿಯನ್ನು ನೋಡಿದೆನು. ೯. ಆಗ ಧೈರ್ಯದಿಂದ ಅದರ ಮೇಲೆ ಕಲ್ಲನ್ನು ಎಸೆದೆನು. ೧೦. ನೀವು ಹಳ್ಳಿಯಿಂದ ಯಾವಾಗ ಬರುತ್ತೀರಿ ? ೧೧. ಈಗ ಅಂಗಡಿಗೆ ಹೋಗಬೇಡ. ೧೨. ಎಲೈ ಕೋಗಿಲೆಗಳೇ, ಸುಮ್ಮನಿರಬೇಡಿ ; ಯಾವಾಗಲೂ ಹಾಡಿರಿ. ೧೩. ವಿದ್ವಾಂಸರೇ, ದಯವಿಟ್ಟು ಇಲ್ಲಿ ಕುಳಿತುಕೊಳ್ಳಿರಿ. ೧೪. ನಾವು ಹೇಗಾದರೂ ಸತ್ಯವನ್ನೇ ಹೇಳೋಣ. ೧೫. ನಾನೂ ನೀನೂ ಈ ದಿನ ನದಿಯಲ್ಲಿ ಸ್ನಾನ ಮಾಡೋಣ[1].

೧೦. ಮಿಶ್ರೋದಾಹರಣೆಗಳು

अभ्यासः १९.

कर्णाटभाषया परिवर्तयत—

१. काशीपुरे कश्चन विद्वानभवत्। २. सः शास्त्राणां प्रवचनेन ग्रन्थानां रचनया च अजीवत्। ३. एकदा एकः वटुः विद्याभ्यासाय तस्यान्तिकमागच्छत्। ४. भोः, अयं वटुः विद्यार्जनाय भवतां सन्निधिं प्राप्तः इत्यवदत्। ५. स विद्वान् 'अस्य बालकस्य मेधां[2] पश्याम' इति एवमपृच्छत्। ६. हे बालक, 'देवः कुत्र वसति ? उत्तरं वद' इति। ७. ततः अयं बालः 'देवः कुत्र न वसतीति कृपया वदत' इति प्रत्यवदत्। ८. स विद्वान् अनेन वचनेन बालकोऽयं बुद्धिमान् इत्यबोधत्। ९. बालक, तव उत्तरेण संतुष्टः अभवम्। १०. देवः सर्वत्र वसति, सः सर्वव्यापी। ११. इमं विषयं त्वं सम्यक् बोधसि।

---

[1] मजाव [2] ಬುದ್ಧಿಯನ್ನು.

१२. त्वमिव धीमान् शिष्यः दुर्लभः। १३. मम संनिधौ शास्त्राणामध्ययनमर्हसि इत्यवदत्। १४. स वटुः कालान्तरे विद्यया महतीं कीर्तिमविन्दत्। १५. धीमतां प्रज्ञा पूर्व एव वयसि प्रकाशिता भवति। १६. तस्या अभिभवः कुतः?

अभ्यासः २०.

संस्कृतभाषया परिवर्तयत—

೧. ಗೋದಾವರಿಯ ತೀರದಲ್ಲಿ ಒಂದು ಆಲದಮರವಿದ್ದಿತು. ೨. ಆ ಮರದಲ್ಲಿ ಬಹಳ ಗಿಣಿಗಳು ವಾಸವಾಗಿದ್ದವು. ೩. ಅವುಗಳ ಮರಿಗಳು[1] ಗೂಡುಗಳಲ್ಲಿ[2] ಬೆಳೆಯುತ್ತಿದ್ದವು. ೪. ಹೀಗೆ ಇರುತ್ತಿರಲು ಒಮ್ಮೆ ದೊಡ್ಡ ಮಳೆಯು ಬಂದಿತು. ೫. ಆಗ ಒಂದು ಕಪಿಗಳ ಹಿಂಡು[3] ಮರದ ಬುಡಕ್ಕೆ ಬಂದಿತು. ೬. ಚಳಿಯಿಂದ ಅವುಗಳಿಗೆ ಬಹಳ ತೊಂದರೆಯಾಗಿದ್ದಿತು. ೭. ಗಿಣಿಗಳು ಕಪಿಗಳನ್ನು ಕುರಿತು ಹೀಗೆ ಹೇಳಿದವು. ೮. ಎಲೈ ಕಪಿಗಳೇ, ನಿಮಗೆ ಕೈಗಳೂ ಕಾಲುಗಳೂ ಇಲ್ಲವೋ ? ೯. ದೇವರು ಅವನ್ನು ಏಕೆ ಕೊಟ್ಟಿರುವನು ? ೧೦. ಮಳೆಯಲ್ಲಿ ನೆನೆಯುತ್ತಾ ನಿಂತಿದ್ದೀರಿ. ೧೧. ನೋಡಿ, ನಾವು ಗೂಡುಗಳಲ್ಲಿ ಸುಖವಾಗಿ ಇದ್ದೇವೆ. ೧೨. ಮನೆಗಳ ರಚನೆಯಿಂದ ಸುಖಿಗಳಾಗಿರಿ. ೧೩. ಆಗ ಕಪಿಗಳು ಪಕ್ಷಿಗಳ ಮೇಲೆ ಕೋಪಗೊಂಡವು. ೧೪. ಅವುಗಳ ಗೂಡುಗಳನ್ನೂ, ಮರಿಗಳನ್ನೂ ಎಸೆದವು. ೧೫. ದುಷ್ಟರಿಗೆ ಉಪದೇಶಿಸುವುದು ನಮ್ಮ ವಿಪತ್ತಿಗೆ ಕಾರಣವಾಗುತ್ತದೆ. ೧೬. ಅಲ್ಲಿ ಏನನ್ನು ಹೇಳುತ್ತೀಯೆ ?

---

[1] अपत्यानि [2] नीडेषु [3] यूथम्

೧೧. ವಿಶೇಷಣಗಳು

ಇವುಗಳನ್ನು ಓದಿರಿ.

नीलः मेघः=ಕಪ್ಪಾದ ಮೋಡ.

नीला शाटी=ಕಪ್ಪಾದ ವಸ್ತ್ರ.

नीलं कुसुमम्=ಕಪ್ಪಾದ ಹೂವು.

ಇಲ್ಲಿ ನೀಲಶಬ್ದವು ಮೋಡ, ವಸ್ತ್ರ ಮತ್ತು ಹೂಗಳಲ್ಲಿ ಇರತಕ್ಕ ಒಂದು ಗುಣವನ್ನು ತಿಳಿಸುತ್ತದೆ. ಹೀಗೆಯೇ **दीर्घ, रक्त, कृष्ण** ಮೊದಲಾದ ಶಬ್ದಗಳು ಗುಣ ಅಥವಾ ಧರ್ಮವನ್ನು ಬೋಧಿಸುತ್ತವೆ. ಇವು ಪದಾರ್ಥದಲ್ಲಿರುವ ಒಂದು ವಿಶೇಷವನ್ನು ತೋರಿಸುವುದರಿಂದ ಇವುಗಳಿಗೆ ವಿಶೇಷಣಗಳೆಂದು ಹೆಸರು. ವಿಶೇಷಣವು ಯಾವುದನ್ನು ವಿಶೇಷಿಸುತ್ತದೆಯೋ ಅದಕ್ಕೆ ವಿಶೇಷ್ಯವೆಂದು ಹೆಸರು. ಸಂಸ್ಕೃತದಲ್ಲಿ ವಿಶೇಷಣವು ವಿಶೇಷ್ಯದ ಲಿಂಗ, ವಚನ, ವಿಭಕ್ತಿಗಳನ್ನು ಹೊಂದುತ್ತದೆ. ಕೆಳಗಿನ ವಾಕ್ಯಗಳಿಂದ ಇದು ಇನ್ನೂ ಸ್ಪಷ್ಟವಾಗುವುದು.

१. **उन्नतं वृक्षमारोहति**–ಎತ್ತರವಾದ ಮರವನ್ನು ಹತ್ತುತ್ತಾನೆ.

२. **कठिनायां शिलायामुपविशति**–ಒರಟಾದ ಕಲ್ಲಿನಮೇಲೆ ಕುಳಿತುಕೊಳ್ಳುತ್ತಾನೆ.

३. **स्वादूनि फलानि खादति**=ಸಿಹಿಯಾದ ಹಣ್ಣುಗಳನ್ನು ತಿನ್ನುತ್ತಾನೆ.

ಸಂಖ್ಯಾವಾಚಕಗಳು ಯಾವಾಗಲೂ ವಿಶೇಷಣಗಳಾಗಿರುತ್ತವೆ. ಈ ಶಬ್ದಗಳ ರೂಪಭೇದವನ್ನು ಗಮನಿಸಿರಿ.

ಪ್ರಥಮಾವಿಭಕ್ತಿ

ಪುಲ್ಲಿಂಗ	ಸ್ತ್ರೀಲಿಂಗ	ನಪುಂಸಕಲಿಂಗ
एकः=ಒಂದು	**एका**	**एकम्**
द्वौ–ಎರಡು	**द्वे**	**द्वे**

त्रयः-ಮೂರು	तिस्रः	त्रीणि
चत्वारः-ನಾಲ್ಕು	चतस्रः	चत्वारि

पञ्च ಮೊದಲಾದ ಉಳಿದ ಶಬ್ದಗಳು ಮೂರು ಲಿಂಗಗಳಲ್ಲಿಯೂ ಒಂದೇ ವಿಧವಾದ ರೂಪಗಳನ್ನು ಹೊಂದುತ್ತವೆ.

अभ्यासः २१.

कर्णाटभाषया परिवर्तयत—

१. नीलः मेघः आकाशे चरति। २. नारिकेलवृक्षः उन्नतः भवति। ३. सीता कठिनायां शिलायां कथमुपविशेत्? ४. हे विद्यार्थिनः, स्वेषु कार्येषु सदा जागरूका भवत। ५. यूयं वस्त्रेण शोधितं जलं पिबेत। ६. रामलक्ष्मणौ महर्षिं विश्वामित्रमनमताम्। ७. नार्यः भगवन्तं विश्वेश्वरमर्चयन्ति। ८. नद्यां मलिनानि वस्त्राणि क्षालयाम। ९. कपटशीलः शकुनिः काञ्चन युक्तिमचिन्तयत्। १०. रक्षिणः सर्वेषु स्थलेषु चोरान् मार्गयन्तु। ११. न्यायाधिपतिः चोरं त्रीणि रूप्यकाणि अदण्डयत्। १२. मातः, एकां कथां कथय। १३. मम पिता द्वौ वृषभौ तिस्रः धेनूश्च पालयति। १४. विद्यार्थिनः सर्वे दिवास्वापं वर्जयेयुः। १५. पाण्डवाः धृतराष्ट्रस्य शतं पुत्रानजयन्।

अभ्यासः २२.

संस्कृतभाषया परिवर्तयत—

೧. ನಾಯಿಯ ಬಾಲವು ಡೊಂಕಾಗಿರುತ್ತದೆ. ೨. ಬುದ್ಧಿವಂತನಾದ ಪುರುಷನು ಸುಖದಿಂದ ಜೀವಿಸುತ್ತಾನೆ. ೩. ಔರಂಗಜೇಬನು ಶೂರನಾದ ಶಿವಾಜಿಯನ್ನು ಗೆಲ್ಲಲಿಲ್ಲ. ೪. ಒಣಗಿದ ಕೆರೆಯಲ್ಲಿ ಮೀನುಗಳು ಹೇಗೆ ಜೀವಿಸುತ್ತವೆ ? ೫. ವಿದ್ವಾಂಸರು ಅಹಂಕಾರಿಗಳಾದ ಹಣವಂತರನ್ನು ಲಕ್ಷಿಸುವುದಿಲ್ಲ.[1] ೬. ಶರತ್ಕಾಲದಲ್ಲಿ ಬೆಳದಿಂಗಳು ಮನೋಹರವಾಗಿರುತ್ತದೆ. ೭. ಈ ದಿನ ನೀನು ಕೊಳೆ ಬಟ್ಟೆಯನ್ನು ಏಕೆ ಧರಿಸಿರುವೆ ? ೮. ನಿರಪರಾಧಿಗಳಾದ ಜನರನ್ನು ಕಂಸನು ಪೀಡಿಸುತ್ತಿದ್ದನು. ೯. ನಿನ್ನೆ ಕಳ್ಳರು ಬಹಳ ಹಣವನ್ನು ಕದ್ದರು. ೧೦. ಎಲ್ಲಾ ಜನರೂ ದೇವರನ್ನು ಪೂಜಿಸಲಿ. ೧೧. ನಾನು ಎರಡು ಮಾವಿನ ಹಣ್ಣುಗಳನ್ನು ತಿಂದೆನು. ೧೨. ದಶರಥನಿಗೆ ಮೂವರು ಹೆಂಡತಿಯರಿದ್ದರು. ೧೩. ಹಿಂದೆ ಹಿಂದೂ ದೇಶದಲ್ಲಿ ವಿದುಷಿಯರಾದ ಸ್ತ್ರೀಯರಿದ್ದರು. ೧೪. ನಿನ್ನ ಬಲಗೈಯಲ್ಲಿ ಏನಿದೆ ? ೧೫. ನನ್ನ ಬಲಗೈಯಲ್ಲಿ ಲೇಖನಿ ಇದೆ.

೧೨. ಆತ್ಮನೇಪದ; ವರ್ತಮಾನಕಾಲ

ಧಾತುವಿನ ಮೇಲೆ ಬರುವ ಪ್ರತ್ಯಯಗಳಲ್ಲಿ ಪರಸ್ಮೈಪದ ಮತ್ತು ಆತ್ಮನೇಪದಗಳೆಂದು ಎರಡು ಭೇದವುಂಟು. ಪರಸ್ಮೈಪದವನ್ನು ಹೊಂದುವ ಧಾತುವಿಗೆ ಪರಸ್ಮೈಪದಿ ಎಂದೂ, ಆತ್ಮನೇಪದವನ್ನು ಹೊಂದುವ ಧಾತುವಿಗೆ ‘ ಆತ್ಮನೇಪದಿ ’ ಎಂದೂ ಹೆಸರು. ಕೆಲವು ಧಾತುಗಳು ಎರಡು ವಿಧವಾದ ಪ್ರತ್ಯಯಗಳನ್ನೂ ಹೊಂದುತ್ತವೆ. ಇವಕ್ಕೆ ‘ಉಭಯಪದಿ’ ಎಂದು ಹೇಳುತ್ತಾರೆ. ಹಿಂದಿನ ಪಾಠಗಳಲ್ಲಿ ಪ್ರಯೋಗಿಸಿದ ಧಾತುಗಳೆಲ್ಲಾ ಪರಸ್ಮೈಪದಿಗಳು. ಇನ್ನು ಮುಂದೆ ಕೆಲವು ಆತ್ಮನೇಪದಿಗಳನ್ನು ಪರಿಚಯ ಮಾಡಿಕೊಳ್ಳೋಣ.

---

[1] न गणयन्ति

मुद् ಧಾತು (ಆತ್ಮನೇಪದಿ)–ಸಂತೋಷಪಡು; ವರ್ತಮಾನಕಾಲ (ಲಟ್)

ಪ್ರ. ಪುರುಷ	मोदते	मोदेते	मोदन्ते
ಮ. ಪುರುಷ	मोदसे	मोदेथे	मोदध्वे
ಉ. ಪುರುಷ	मोदे	मोदावहे	मोदामहे

ಭೂತಕಾಲ—ಲಙ್

ಪ್ರ. ಪುರುಷ	अमोदत	अमोदेताम्	अमोदन्त
ಮ. ಪುರುಷ	अमोदथाः	अमोदेथाम्	अमोदध्वम्
ಉ. ಪುರುಷ	अमोदे	अमोदावहि	अमोदामहि

अभ्यासः २३.

कर्णाटभाषया परिवर्तयत—

१. वायुना वृक्षाः कम्पन्ते। २. कीटाः सस्यानि बाधन्ते। ३. दिवा सूर्यः रात्रौ चन्द्रमाश्च राजेते। ४. सख्युः कुशलवार्तया वयं मोदामहे। ५. सीतायाः पतिः सेतोः बन्धनाय अयतत। ६. धनिनोऽपि गुणी ज्यायानिति सुधियो मन्यन्ते। ७. भोः विद्वांसः, कृपणं राजानं कुतः याचध्वे? ८. शुनो लाङ्गूलं सर्वदा कुटिलं वर्तते। ९. युवानः महान्तमपि श्रममसहन्त। १०. शिष्याः गुरुभ्यः आशिषमलभन्त। ११. दध्ना कलितमन्नं मह्यमतीव रोचते[1]। १२. विनाशकाले रावणस्य विपरीता बुद्धिरजायत। १३. दशरथस्य चत्वारः सुताः अजायन्त। १४. मूर्खस्य शरीरं वर्धते, न बुद्धिः। १५. पार्वती तपसः श्रमं कथं सहते इति शङ्कामहे।

[1]रुच् ಧಾತುವಿನ ಯೋಗವಿದ್ದಾಗ ಯಾರಿಗೆ ರುಚಿಸುವುದೋ ಅವರನ್ನು ಬೋಧಿಸುವ ಶಬ್ದದ ಮೇಲೆ ಚತುರ್ಥೀವಿಭಕ್ತಿ ಬರುವುದು.

अभ्यासः २४.

संस्कृतभाषया परिवर्तयत—

೧. ಮಲೆನಾಡಿನಲ್ಲಿ ಚಳಿಜ್ವರವು ಜನರನ್ನು ಬಾಧಿಸುತ್ತದೆ. ೨. ತಂದೆ ತಾಯಿಗಳ ಆಶೀರ್ವಾದದಿಂದ ನಾವು ಏಳಿಗೆ ಹೊಂದುತ್ತೇವೆ.[1] ೩. ನಾಲಂದ ವಿಶ್ವವಿದ್ಯಾಲಯದಲ್ಲಿ ಹತ್ತುಸಾವಿರ[2] ವಿದ್ಯಾರ್ಥಿಗಳು ಇದ್ದರು. ೪. ಉತ್ತಾನ ಪಾದನಿಗೆ ಧ್ರುವ, ಉತ್ತಮ ಎಂಬ ಇಬ್ಬರು ಮಕ್ಕಳು ಹುಟ್ಟಿದರು. ೫. ಕೆಟ್ಟ ಕೆಲಸದಿಂದ ನೀನು ಏಕೆ ನಾಚದಿರುವೆ? ೬. ಯುದ್ಧಭೂಮಿಯಲ್ಲಿ ಬಹಳ ಸೈನಿಕರು ಮಡಿದರು.[3] ೭. ಹಕ್ಕಿಗಳು ಆಕಾಶದಲ್ಲಿ ವೇಗವಾಗಿ ಹಾರುತ್ತವೆ.[4] ೮. ನಿಮ್ಮ ಕ್ಷೇಮಸಮಾಚಾರದಿಂದ ನಾವು ಸಂತೋಷಪಟ್ಟೆವು. ೯. ನೀವು ಶ್ರದ್ಧೆಯಿಂದ ಔಷಧವನ್ನು ಸೇವಿಸುತ್ತೀರಿ. ೧೦. ಮಹಾತ್ಮಾ ಗಾಂಧಿ ಯವರು ಸ್ವರಾಜ್ಯಕ್ಕಾಗಿ ಕಷ್ಟಗಳನ್ನು ಸಹಿಸಿದರು. ೧೧. ಈ ಪಾಠಶಾಲೆ ಯಲ್ಲಿ ವಿದ್ಯಾರ್ಥಿಗಳು ಸಂಸ್ಕೃತ ಭಾಷೆಯನ್ನು ಕಲಿಯುತ್ತಾರೆ. ೧೨. ಈ ದಿನ ನೀನು ಆರೋಗ್ಯದಿಂದಿಲ್ಲ. ೧೩. ಅವರು ಬರುತ್ತಾರೋ ಇಲ್ಲವೋ ಎಂದು ಶಂಕಿಸುತ್ತೇನೆ. ೧೪. ನಾನು ಸಂಸ್ಕೃತದಲ್ಲಿ ಅರುವತ್ತು ಅಂಕಗಳನ್ನು ಪಡೆದೆನು. ೧೫. ಅವಳು ಇದರಿಂದ ಪ್ರಯೋಜನವಿಲ್ಲವೆಂದು ತಿಳಿಯುತ್ತಾಳೆ.[5]

೧೩. मुद् ಧಾತು–ಆತ್ಮನೇಪದಿ ; ಆಜ್ಞಾರ್ಥ (लोट्)

	ಏಕವಚನ	ದ್ವಿವಚನ	ಬಹುವಚನ
ಪ್ರ. ಪುರುಷ	मोदताम्	मोदेताम्	मोदन्ताम्
ಮ. ಪುರುಷ	मोदस्व	मोदेथाम्	मोदध्वम्
ಉ. ಪುರುಷ	मोदै	मोदावहै	मोदामहै

[1] एधामहे [2] अयुतम् [3] अम्रियन्त [4] डयन्ते [5] मन्यते

ವಿಧ್ಯರ್ಥ (विधिलिङ्)

ಪ್ರ. ಪುರುಷ	मोदेत	मोदेयाताम्	मोदेरन्
ಮ. ಪುರುಷ	मोदेथाः	मोदेयाथाम्	मोदेध्वम्
ಉ. ಪುರುಷ	मोदेय	मोदेवहि	मोदेमहि

अभ्यासः २५.

कर्णाटभाषया परिवर्तयत—

१. अस्मिन् दर्पणे तव मुखमीक्षस्व। २. देशसेवायै जनाः आपदः सहन्ताम्। ३. त्वरस्व शालायै; एकादश घण्टाः अभवन्। ४. प्रथमकक्ष्यायामुत्तीर्णाः पारितोषिकं लभेरन्। ५. सदसि सर्वेऽपि मातृभाषायां भाषेरन्। ६. अस्माकं गुरून् वन्दामहै। ७. दीनानामुद्धरणाय यतध्वम्। ८. वत्से, वन्दस्व देवताः। ९. रामस्य कुशलवार्तया पौराः मोदन्ताम्। १०. अध्यक्षस्य उपवेशाय मध्ये आसन्दी वर्तताम्। ११. यूयमात्मनो दुष्कृत्येन लज्जेध्वम्। १२. रामलक्ष्मणौ वने सीतां मृगयेताम्। १३. अहमद्य भीमेन सह स्पर्धेय। १४. कायेन वाचा मनसा च सत्यमेव सेवामहै। १५. सुलभां सुरसाञ्च संस्कृतभाषां शिक्षध्वम्। १६. व्याघ्रस्य गर्जनात् धेनुरकम्पत।

अभ्यासः २६.

संस्कृतभाषया परिवर्तयत—

೧. ನಾವು ಈ ದಿನ ಚಲಚ್ಚಿತ್ರವನ್ನು ನೋಡೋಣ. ೨. ದೇವರ ದಯೆಯಿಂದ ಆರೋಗ್ಯವಂತನಾಗಿ ಅಭಿವೃದ್ಧಿ ಹೊಂದು. ೩. ವಿದ್ಯಾಭ್ಯಾಸಕ್ಕಾಗಿ ಕಷ್ಟಗಳನ್ನು ಸಹಿಸಿರಿ. ೪. ನೀವು ಇಂಗ್ಲಿಷಿನಲ್ಲಿ ಏಕೆ ಮಾತನಾಡಬೇಕು ?[1] ೫. ಹುಡುಗರು ಪ್ರತಿದಿನ ಸಾಯಂಕಾಲ ಆಟವಾಡಲಿ. ೬. ಅಮ್ಮಾ, ಈ ಸಭೆಯಲ್ಲಿ ನಾನು ಯಾರನ್ನು ವಂದಿಸಲಿ ? ೭. ಎಲ್ಲರೂ ಕಷ್ಟಕಾಲದಲ್ಲಿ ಧೈರ್ಯದಿಂದ ಇರಬೇಕು. ೮. ಯಾವಾಗಲೂ[2] ಇತರರನ್ನು ಬಯ್ಯಬೇಡ.[3] ೯. ನಮ್ಮ ದೇಶದಲ್ಲಿ ವೀರರಾದ ಯುವಕರೂ ಯುವತಿಯರೂ ಹುಟ್ಟಲಿ. ೧೦. ಸ್ವಾತಂತ್ರ್ಯಕ್ಕಾಗಿ ವಿರೋಧಿಗಳೊಡನೆ ಹೊಡೆದಾಡೋಣ. ೧೧. ಮಾತೃಭೂಮಿಯ ರಕ್ಷಣೆಗಾಗಿ ಸಾಯೋಣ. ೧೨. ದೇಶದ್ರೋಹಿಗಳು ನಾಶವಾಗಲಿ. ೧೩. ನಿನ್ನ ದಡ್ಡತನಕ್ಕಾಗಿ ನಾಚಿಕೆಪಡು. ೧೪. ಪ್ರತಿದಿನ ಬೆಳಿಗ್ಗೆ ಒಳ್ಳೆಯ ಗಾಳಿಯನ್ನು ಸೇವಿಸಿರಿ. ೧೫. ನಮ್ಮ ದೇಶವು ಅಭಿವೃದ್ಧಿಹೊಂದಲಿ. ೧೬. ನೀನು ಯಾರಿಂದ ಸಂಗೀತವನ್ನು ಕಲಿಯುತ್ತೀಯೆ ?

೧೪. ತುಮುನ್ ಮತ್ತು क्त्वा ಪ್ರತ್ಯಯಗಳು.

ಇವೆರಡು ಪ್ರತ್ಯಯಗಳೂ ಧಾತುಗಳ ಮೇಲೆ ಬರುತ್ತವೆ. ಲಿಂಗ, ವಚನಗಳಿಗೆ ಅನುಸಾರವಾಗಿ ರೂಪಭೇದವು ಈ ಪ್ರತ್ಯಯಗಳನ್ನು ಹೊಂದಿರುವ ಶಬ್ದಗಳಿಗೆ ಇಲ್ಲ. ಆದ್ದರಿಂದ ಈ ಶಬ್ದಗಳು ಅವ್ಯಯಗಳ ಗುಂಪಿಗೆ ಸೇರುತ್ತವೆ. ಇವುಗಳನ್ನು ' ಕೃದಂತಾವ್ಯಯ 'ಗಳೆನ್ನುತ್ತಾರೆ.

१. तुमुन्—ಇದು ಉದ್ದೇಶ ಅಥವಾ ಪ್ರಯೋಜನವನ್ನು ತೋರಿಸುವಾಗ ಧಾತುವಿನ ಮೇಲೆ ಬರುತ್ತದೆ. ಸಾಮಾನ್ಯವಾಗಿ ಚತುರ್ಥೀ ವಿಭಕ್ತಿಯ ಅರ್ಥದಲ್ಲಿ ಬರುವುದೆಂದು ತಿಳಿಯಬಹುದು.

---

[1] कुतो भाषेध्वम् ? [2] कदाऽपि [3] मा शपस्व

ಉದಾಹರಣೆ :—

कृ+तुमुन्=कर्तुम्=ಮಾಡುವುದಕ್ಕೆ

गम्+तुमुन्=गन्तुम्=ಹೋಗುವುದಕ್ಕೆ

पठ्+तुमुन्=पठितुम्=ಓದುವುದಕ್ಕಾಗಿ

भक्ष्+तुमुन्=भक्षयितुम्=ತಿನ್ನುವುದಕ್ಕಾಗಿ

लिख्+तुमुन्=लेखितुम्=ಬರೆಯುವುದಕ್ಕೋಸ್ಕರ

೨. **क्त्वा**—ಒಬ್ಬನು ಒಂದು ಕೆಲಸವನ್ನು ಮಾಡಿದ ಮೇಲೆ ಇನ್ನೊಂದು ಕೆಲಸವನ್ನು ಮಾಡುತ್ತಾನೆಂದು ತಿಳಿಯೋಣ. ಆಗ ಮೊದಲ ನೆಯ ಕೆಲಸವನ್ನು ಬೋಧಿಸುವ ಧಾತುವಿನ ಮೇಲೆ ಈ ಪ್ರತ್ಯಯವು ಬರುತ್ತದೆ.

ಉದಾಹರಣೆ :—

कृ+क्त्वा=कृत्वा=ಮಾಡಿ

गम्+क्त्वा=गत्वा=ಹೋಗಿ

पठ्+क्त्वा=पठित्वा=ಓದಿ

भक्ष्+क्त्वा=भक्षयित्वा=ತಿಂದು

लिख्+क्त्वा=लिखित्वा, लेखित्वा=ಬರೆದು

तुमुन् ಪ್ರತ್ಯಯದಲ್ಲಿ **तुम्** ಎಂಬುದು, **क्त्वा** ಪ್ರತ್ಯಯದಲ್ಲಿ **त्वा** ಎಂಬುದು ಉಳಿದು ಅನ್ಯಭಾಗವು ಲೋಪವನ್ನು ಹೊಂದುತ್ತದೆ.

ವಿ.ಸೂ.—ಧಾತುವು ಉಪಸರ್ಗದಿಂದ ಕೂಡಿದ್ದರೆ ಮುಂದಿರುವ **क्त्वा** ಪ್ರತ್ಯಯಕ್ಕೆ **ल्यप्** ಎಂಬ ಆದೇಶವು ಬರುತ್ತದೆ. ಇದರಲ್ಲಿ '**य**' ಎಂಬುದು ಮಾತ್ರ ಉಳಿಯುತ್ತದೆ. ಧಾತುವಿನ ಅಂತ್ಯದಲ್ಲಿ ಹ್ರಸ್ವ ಸ್ವರವಿದ್ದರೆ '**य**' ಎಂಬುದು **त्य** ಎಂಬ ರೂಪವನ್ನು ಹೊಂದುತ್ತದೆ.

ಉದಾಹರಣೆ :—

आगत्य=ಬಂದು	**विरच्य**=ವಿರಚಿಸಿ
विलिख्य=ಬರೆದು	**उपदिश्य**=ಉಪದೇಶ ಮಾಡಿ
संदिश्य=ಹೇಳಿಕಳುಹಿಸಿ	**प्राप्य**=ಸೇರಿ
उपकृत्य=ಉಪಕಾರಮಾಡಿ	**आलप्य**=ಹೇಳಿ
आदृत्य=ಉಪಚಾರಮಾಡಿ	**वितत्य**=ಹರಡಿ
विजित्य=ಗೆದ್ದು	**समेत्य**=ಕೂಡಿ
संभूय=ಒಟ್ಟಾಗಿ	**आनीय**=ತಂದು

ಉಪಸರ್ಗಗಳು :—ಇವು ಒಟ್ಟು ಇಪ್ಪತ್ತೆರಡಿವೆ. ಯಾವುವೆಂದರೆ

प्र, वि, परा, अप, सम्, अनु, अव, निर्, निस्, दुर्, दुस्, अति, प्रति, सु, उत्, अधि, परि, अपि, आ, अभि, नि, उप।

ಇದು ಉಪಸರ್ಗಗಳ ಸಂಗ್ರಹಶ್ಲೋಕ.

प्रविपरापसमन्ववनिर्निसौ दुरतिदुस्प्रतिसूदधिपर्यपि ।
(तदनु) चाङ्भिनी उप विंशतिर्द्विसहितेत्युपसर्गसमाह्वयः ॥

ಇವು ಸಂದರ್ಭಾನುಸಾರವಾಗಿ ಧಾತುಗಳ ಹಿಂದೆ ಸೇರಿ ಅವುಗಳ ಅರ್ಥವನ್ನು ಬದಲಾಯಿಸುವುವು.

अभ्यासः २७.

कर्णाटभाषया परिवर्तयत—

१. कपोताः धान्यानि भक्षयितुमागच्छन्ति। २. आङ्ग्ल-भाषामभ्यसितुं वयं यतामहे। ३. नटाः नेपथ्यं[1] कृत्वा अभि-

[1] ನೇಪಥ್ಯ ಧಾರಣೆಯನ್ನು

नयन्ति। ४. रामो वनं गत्वा दैत्यान् समहरत्। ५. कर्मकराः कार्याणि कृत्वा कार्यालयात् निरगच्छन्। ६. आर्याणां पद्धतिं विज्ञातुं संस्कृतभाषामभ्यस्येत्। ७. यूयं संस्कृतभाषायां लेखितुं प्रयतध्वम्। ८. विप्राः नद्यां स्नात्वा संध्यावन्दनमारभन्त। ९. यूयं सर्वे संभूय विनायकस्य उत्सवमाचरत। १०. नृपोऽसौ शत्रून् विजित्य राजधानीं प्राविशत्। ११. इदानीं पत्रं विलिख्य गुरुभ्यः प्रेषय। १२. वत्सः पयः पातुं धेनोः समीपमधावत्। १३. पिशुनः विश्वसितुं कथं योग्यो भवेत्? १४. अन्तः प्रविश्य देवं वन्दित्वा निवर्तामहै। १५. वस्त्राणि क्षालयित्वा स्नातुं नदीमवतरामि। १६. अहमापणं गत्वा फलान्यानयम्।

अभ्यासः २८.

संस्कृतभाषया परिवर्तयत—

೧. ಅರ್ಜುನನು ಬೇಟೆಯನ್ನು ಆಡಲು[1] ಕಾಡಿಗೆ ಹೋದನು. ೨. ನನ್ನ ಅಕ್ಕನು ನನ್ನನ್ನು ನೋಡಲು ಅಪೇಕ್ಷಿಸಿದಳು. ೩. ಪೋಲೀಸಿನವರನ್ನು[2] ನೋಡಿ ಕಳ್ಳರು ಓಡಿಹೋದರು. ೪. ನನ್ನ ಪುಸ್ತಕವನ್ನು ಕೊಟ್ಟು ಹೋಗು. ೫. ನಾಟಕವನ್ನು ನೋಡುವುದಕ್ಕೆ ಹೋಗುವಿರೋ? ೬. ನೀನು ಹಿಂದಿಯನ್ನು ಕಲಿಯಲು ಪ್ರಯತ್ನಿಸು. ೭. ನಾನು ಪೇಟೆಗೆ[3] ಹೋಗಿ ತೆಂಗಿನಕಾಯಿಯನ್ನು ತರಬೇಕು. ೮. ನೀವು ಚಾಪೆಯ ಮೇಲೆ ಕುಳಿತುಕೊಂಡು ಬರೆಯಿರಿ. ೯. ಬೆಳಗ್ಗೆ ವ್ಯಾಯಾಮವನ್ನು ಮಾಡಿ ಅವರು ಹಾಲನ್ನು ಕುಡಿಯುತ್ತಾರೆ. ೧೦. ಔರಂಗಜೇಬನು ಶಿವಾಜಿಯನ್ನು ಮೋಸಪಡಿಸಲು ಅನೇಕಸಲ[4] ಪ್ರಯತ್ನಿಸಿದನು. ೧೧. ಬೆಕ್ಕು ಗೋಡೆ

---

[1] मृगयां कर्तुम् [2] राजपुरुषान् [3] विपणिं [4] असकृत्

ಯನ್ನು ಹತ್ತಿ ನಾಯಿಯಿಂದ ತನ್ನನ್ನು ಕಾಪಾಡಿಕೊಂಡಿತು. ೧೨. ಸೈನಿಕನು ಕುದುರೆಯನ್ನು ಹತ್ತಿ ರಣರಂಗವನ್ನು ಪ್ರವೇಶಿಸಿದನು. ೧೩. ನೀವು ಸ್ನಾನಮಾಡಿ ಶುಚಿಯಾದ ಬಟ್ಟೆಗಳನ್ನು ಧರಿಸಿರಿ. ೧೪. ಅವನು ಈ ವಿಷಯ ವನ್ನು ಕೇಳುವುದಕ್ಕಾಗಿ ಸಮಯವನ್ನು ಕಾದನು.[1] ೧೫. ನಾವು ಸುಖಿ ಗಳಾಗುವುದಕ್ಕಾಗಿ ವಿದ್ಯೆಯನ್ನು ಕಲಿಯಬೇಕು. ೧೬. ನಾಯಿಯು ಬಗುಳಿ ಇಲ್ಲಿಂದ ಓಡಿಹೋಯಿತು.

೧೫. क्तवतु ಮತ್ತು क्त ಪ್ರತ್ಯಯಗಳು.

ಇವೆರಡು ಪ್ರತ್ಯಯಗಳೂ ಭೂತಕಾಲದಲ್ಲಿ ಧಾತುಗಳ ಮೇಲೆ ಬರುತ್ತವೆ. ಇವುಗಳನ್ನು ಹೊಂದಿದ ಶಬ್ದಗಳು ಕ್ರಿಯಾಪದಗಳ ಅರ್ಥವನ್ನು ಬೋಧಿಸುತ್ತಿದ್ದರೂ, ಪ್ರಾತಿಪದಿಕಗಳೆನಿಸಿಕೊಂಡು ಎಲ್ಲಾ ವಚನ, ವಿಭಕ್ತಿಗಳನ್ನೂ ಹೊಂದುತ್ತವೆ. **क्तवतु** ಪ್ರತ್ಯಯವು ಕರ್ತ್ರರ್ಥದಲ್ಲಿ ಬಂದು ಕರ್ತೃವಿಗೆ ವಿಶೇಷಣವಾಗಿರುತ್ತದೆ. **क्त** ಪ್ರತ್ಯಯವು ಗತ್ಯರ್ಥಕ ಮತ್ತು ಅಕರ್ಮಕ ಧಾತುಗಳ ಮೇಲೆ ಕರ್ತ್ರರ್ಥದಲ್ಲಿಯೂ, ಸಕರ್ಮಕ ಧಾತುಗಳ ಮೇಲೆ ಕರ್ಮಾರ್ಥದಲ್ಲಿಯೂ ಬರುತ್ತದೆ. ಕರ್ಮಾರ್ಥದಲ್ಲಿ **क्त** ಪ್ರತ್ಯಯದ ಪ್ರಯೋಗವನ್ನು ಮುಂದಿನ ಪಾಠದಲ್ಲಿ ವಿವರಿಸುತ್ತೇವೆ. ಈ ಪ್ರತ್ಯಯಗಳನ್ನು ಹೊಂದಿದ ಶಬ್ದಗಳು ವಿಶೇಷಣಗಳಾಗಿ ವಿಶೇಷ್ಯದ ಲಿಂಗ, ವಚನ, ಮತ್ತು ವಿಭಕ್ತಿಗಳನ್ನು ಹೊಂದುತ್ತವೆ. **क्तवतु** ಪ್ರತ್ಯಯದಲ್ಲಿ **तवत्** ಎಂಬ ಭಾಗವೂ, **क्त** ಪ್ರತ್ಯಯದಲ್ಲಿ **त** ಎಂಬ ಭಾಗವೂ ಉಳಿಯುತ್ತವೆ. ಬೇರೆ ಬೇರೆ ಲಿಂಗಗಳಲ್ಲಿ ಈ ಶಬ್ದಗಳು ರೂಪಾಂತರಹೊಂದುವುದನ್ನು ಕೆಳಗೆ ಗಮನಿಸಿರಿ.

क्तवतुप्रत्ययः

कृ + **तवत्** = **कृतवान्** = ಮಾಡಿದನು
पठ् + **तवत्** = **पठितवान्** = ಓದಿದನು   } ಪುಲ್ಲಿಂಗ
गम् + **तवत्** = **गतवान्** = ಹೋದನು

---

[1] प्रत्यैक्षत

कृ+तवत्=कृतवती=ಮಾಡಿದಳು पठ् + तवत्=पठितवती=ಓದಿದಳು गम्+तवत्=गतवती=ಹೋದಳು	ಸ್ತ್ರೀಲಿಂಗ
कृ+तवत्=कृतवत्=ಮಾಡಿತು पठ्+तवत्=पठितवत्=ಓದಿತು गम्+तवत्=गतवत्=ಹೋಯಿತು	ನಪುಂಸಕಲಿಂಗ

क्तप्रत्ययः

गम्+त=गतः=ಹೋದನು भी+त=भीतः=ಹೆದರಿದನು	ಪುಲ್ಲಿಂಗ
गम्+त=गता=ಹೋದಳು भी+त=भीता=ಹೆದರಿದಳು	ಸ್ತ್ರೀಲಿಂಗ
गम्+त=गतम्=ಹೋಯಿತು भी+त=भीतम्=ಹೆದರಿತು	ನಪುಂಸಕಲಿಂಗ

अभ्यासः २९.

कर्णाटभाषया परिवर्तयत—

१. वयमद्य क्रीडाङ्गणे कन्दुकेन क्रीडितवन्तः। २. पार्वती शिवं दृष्ट्वा लज्जया चलितवती। ३. हरिणानां यूथं बालतृणानि भक्षयित्वा नन्दितवत्। ४. सा बाला मातुः पुरतः रघुवंशं पठितवती। ५. तं वानरं वीक्ष्य रामो हसितवान्। ६. योधाः शत्रून् विजित्य राजधानीं रक्षितवन्तः। ७. सीता वृक्षे उपविष्टं हनूमन्तं दृष्टवती। ८. घटस्य रन्ध्रात् क्षीरं स्रुतवत्।

९. ध्रुवः एकेन पादेन स्थित्वा महाविष्णुं चिरं ध्यातवान्। १०. नार्यः संक्रान्तिकाले कावेर्यां स्नातवत्यः। ११. रजकः क्षालयितुं वस्त्राणि गृहीत्वा गतः। १२. अमुं धनिकं वितरणशीलं मत्वा याचकाः श्रिताः। १३. संस्कृतभाषायाः बहवः कृतयः इदानीं नष्टाः। १४. विनाशकाले विपरीतबुद्धिस्ते जाता। १५. बहूनि आम्रफलानि वृक्षात् पतितानि।

अभ्यासः ३०.

संस्कृतभाषया परिवर्तयत—

೧. ಉಪಾಧ್ಯಾಯರು ಕುರ್ಚಿಯಮೇಲೆ ಕುಳಿತುಕೊಂಡರು. ೨. ಕೃಷ್ಣನು ಬೆರಳಲ್ಲಿ ಉಂಗುರವನ್ನು[1] ಧರಿಸಿದನು. ೩. ನಾನು ಈ ಅಂಗಡಿಯಲ್ಲಿ ತಾಮ್ರದ ಪಾತ್ರೆಗಳನ್ನು ಕೊಂಡುಕೊಂಡೆನು. ೪. ಅವಳು ಗೋಧಿಹಿಟ್ಟಿನಿಂದ ಹೋಳಿಗೆಯನ್ನು[2] ಮಾಡಿದಳು. ೫. ಶಾರದೆಯು ರಾಮನ ತಂಗಿಯನ್ನು ಊಟಕ್ಕೆ ಕರೆದಳು. ೬. ಹೂವುಗಳು ಆಕಾಶದಿಂದ ಶ್ರೀರಾಮನ ತಲೆಯಮೇಲೆ ಬಿದ್ದವು. ೭. ಕಳೆದ ವರ್ಷ ನಾಲ್ಕನೇ ತರಗತಿಯಲ್ಲಿ ಇಪ್ಪತ್ತು ವಿದ್ಯಾರ್ಥಿಗಳು ಓದಿದರು. ೮. ವಿಷ್ಣುವು ಪ್ರತ್ಯಕ್ಷನಾಗಿ ಮೊಸಳೆಯಿಂದ ಗಜೇಂದ್ರನನ್ನು ರಕ್ಷಿಸಿದನು. ೯. ಅವರು ಈ ಊರಿನಲ್ಲಿ ಒಂದು ಆಸ್ಪತ್ರೆಯನ್ನು[3] ಸ್ಥಾಪಿಸಿದರು. ೧೦. ಬಿರುಗಾಳಿಯಿಂದ ಮರದ ಕೊಂಬೆಗಳು ಅಲ್ಲಾಡಿದವು.[4] ೧೧. ಮಿತ್ರನ ಕುಶಲ ವಾರ್ತೆಯನ್ನು ಕೇಳಿ ರಾಮನು ಸಂತೋಷಪಟ್ಟನು. ೧೨. ಶಕುನಿಯ ವಿಷಬೀಜವು ಫಲಿಸಿತು; ಕೌರವರೆಲ್ಲರೂ ಸತ್ತುಹೋದರು. ೧೩. ಮಳೆಯಿಂದ ಈ ಮಲ್ಲಿಗೆಯ ಬಳ್ಳಿಗಳು ಬಗ್ಗಿದವು.[5] ೧೪. ನಾವಿಬ್ಬರು ನಿನ್ನೆ

---

[1] अङ्गुलीयकम् [2] पोलिकाम् [3] चिकित्सालयम् [4] कम्पिताः [5] विनताः

ನದಿಯಲ್ಲಿ ಸ್ನಾನಮಾಡಿದೆವು. ೧೫. ಮಳೆಯಿಂದ ಆ ಹೂವುಗಳೆಲ್ಲಾ ಉದುರಿದುವು.[1]

೧೬. ಕರ್ಮಣಿಪ್ರಯೋಗ

ಈ ವಾಕ್ಯಗಳನ್ನು ಗಮನಿಸಿ.

१. **शिशुपालः कृष्णमनिन्दत्** = ಶಿಶುಪಾಲನು ಕೃಷ್ಣನನ್ನು ನಿಂದಿಸಿದನು.

२. **पुत्रः पितरमनमत्**= ಮಗನು ತಂದೆಯನ್ನು ನಮಸ್ಕರಿಸಿದನು.

ಮೇಲಿನ ವಾಕ್ಯಗಳಲ್ಲಿ ಕರ್ತೃಪದಗಳು ಪ್ರಥಮಾವಿಭಕ್ತಿಯಲ್ಲಿಯೂ, ಕರ್ಮಪದಗಳು ದ್ವಿತೀಯಾವಿಭಕ್ತಿಯಲ್ಲಿಯೂ ಇವೆ. ಕ್ರಿಯಾಪದವು ಕರ್ತೃಪದದೊಡನೆ ಅನ್ವಯಿಸಿರುವುದರಿಂದ ಈ ವಿಧವಾದ ಪ್ರಯೋಗಕ್ಕೆ ಕರ್ತರಿ ಪ್ರಯೋಗವೆಂದು ಹೆಸರು. ಹಿಂದಿನ ಪಾಠಗಳಲ್ಲಿ ನೀವು ಈ ಬಗೆಯ ವಾಕ್ಯಗಳನ್ನೇ ನೋಡಿರುವಿರಿ. ಆದರೆ ಈ ವಾಕ್ಯಗಳನ್ನು ಗಮನಿಸಿರಿ.

१. **शिशुपालेन कृष्णः अनिन्द्यत** = ಶಿಶುಪಾಲನಿಂದ ಕೃಷ್ಣನು ನಿಂದಿಸಲ್ಪಟ್ಟನು.

२. **पुत्रेण पिता अनम्यत**=ಮಗನಿಂದ ತಂದೆಯು ನಮಸ್ಕರಿಸಲ್ಪಟ್ಟನು.

ಇಲ್ಲಿ ಕರ್ತೃಪದಗಳು ತೃತೀಯಾವಿಭಕ್ತಿಯಲ್ಲಿಯೂ, ಕರ್ಮಪದಗಳು ಪ್ರಥಮಾವಿಭಕ್ತಿಯಲ್ಲಿಯೂ ಇವೆ. ಕ್ರಿಯಾಪದಗಳು ಕರ್ಮಪದದೊಡನೆ ಅನ್ವಯಿಸಿವೆ. ಇದಕ್ಕೆ ಕರ್ಮಣಿಪ್ರಯೋಗವೆಂದು ಹೆಸರು. ಕರ್ಮಣಿ ಪ್ರಯೋಗದಲ್ಲಿ ಕ್ರಿಯಾಪದಗಳು ತಾವು ಅನ್ವಯಿಸುವ ಕರ್ಮಪದಗಳ ವಚನವನ್ನೂ, ಪುರುಷವನ್ನೂ ಹೊಂದುತ್ತವೆ.

ವಿ.ಸೂ.—ಕರ್ಮಣಿಪ್ರಯೋಗದಲ್ಲಿ ಕರ್ಮಪದವನ್ನು ಪ್ರಥಮಾವಿಭಕ್ತಿಯಲ್ಲಿಯೂ, ಕರ್ತೃಪದವನ್ನು ತೃತೀಯಾವಿಭಕ್ತಿಯಲ್ಲಿಯೂ ಪ್ರಯೋಗಿಸಬೇಕು. ಈ ಪ್ರಯೋಗದಲ್ಲಿ ಎಲ್ಲಾಗಣದ ಧಾತುಗಳಮೇಲೂ '**य**' ಎಂಬ

---

[1] गलितानि

ವಿಕರಣಪ್ರತ್ಯಯು ಬಂದು ಅದರ ಮುಂದೆ ಆತ್ಮನೇಪದಪ್ರತ್ಯಯಗಳು ಮಾತ್ರ ಹತ್ತುತ್ತವೆ.

ಹಿಂದಿನ ಪಾಠದಲ್ಲಿ ಸಕರ್ಮಕ ಧಾತುಗಳ ಮೇಲೆ क्त ಪ್ರತ್ಯಯವು ಕರ್ಮಾರ್ಥದಲ್ಲಿ ಬರುತ್ತದೆಯೆಂದು ತಿಳಿಸಿದೆ. ಅಂತಹ ಶಬ್ದಗಳನ್ನು ಕರ್ಮಣಿಪ್ರಯೋಗದ ನಿಯಮದಂತೆ ಉಪಯೋಗಿಸಬೇಕು.

अभ्यासः ३१.

कर्णाटभाषया परिवर्तयत—

१. गृहाणां भित्तयः इष्टकाभिः रच्यन्ते। २. ततः ताः कर्मकरैः सुधया[1] लिप्यन्ते। ३. अस्यां शालायां छात्रैः संस्कृतभाषा पठ्यते। ४. दुर्जनैः सह सख्यं कुर्वाणस्त्वं मया त्यज्यसे। ५. क्रीडायां विजयशालिनो वयं मित्रैरभिनन्द्यामहे। ६. वनवासाय गन्तुमिच्छता रामेण कौसल्या अवन्द्यत। ७. वत्सोऽयं मुच्यताम्; अनेन धेन्वाः क्षीरं पीयताम्। ८. विवाहकाले वध्वा अरुन्धतीनामकं नक्षत्रं दृश्येत। ९. विद्वांसः स्वदेशे परदेशे च पूज्यन्ते। १०. महानसे सूदेन अन्नमपच्यत। ११. अस्माभिः वस्त्राणि क्षालयितुं नदीं नीतानि। १२. ह्यः रात्रौ वणिजो गृहे स्तेनैराभरणानि चोरितानि। १३. एकाकिनी सीता परिव्राजकस्य वेषं धृतवता रावणेन दृष्टा। १४. विपदि मम सुहृदाऽहमुपकृतः। १५. सीतया सह गच्छन्तौ रामलक्ष्मणौ आरण्यकैः[2] कुतूहलेन वीक्षितौ। १६. त्वया कति पुस्तकानि पठितानि?

---

1 ಸುಣ್ಣದಿಂದ 2 ಕಾಡುಜನರಿಂದ

अभ्यासः ३२.

संस्कृतभाषया परिवर्तयत—

೧. ನಿನಗೆ ನನ್ನಿಂದ ಒಂದು ಪತ್ರ ಬರೆಯಲ್ಪಡುತ್ತದೆ. ೨. ಹಗಲು ನಕ್ಷತ್ರಗಳು ನೋಡಲ್ಪಡುವುದಿಲ್ಲ. ೩. ಈ ತರಗತಿಯಲ್ಲಿ ಇಪ್ಪತ್ತು ವಿದ್ಯಾರ್ಥಿಗಳಿಂದ ಸಂಸ್ಕೃತವು ಕಲಿಯಲ್ಪಡುತ್ತದೆ. ೪. ಋಷಿಗಳಿಂದ ಹಣ್ಣುಗಳೂ ಗೆಡ್ಡೆಗಳೂ[1] ತಿನ್ನಲ್ಪಡುತ್ತವೆ. ೫. ನಿಮ್ಮಿಂದ ದುರ್ಜನರ ಸಹವಾಸವು ಬಿಡಲ್ಪಡಲಿ. ೬. ಕುಪಿತನಾದ ಹನುಮಂತನಿಂದ ಲಂಕೆಯು ಸುಡಲ್ಪಟ್ಟಿತು. ೭. ಸೋಮಾರಿಯಿಂದ ಹಣವಾಗಲಿ, ವಿದ್ಯೆಯಾಗಲಿ ಹೇಗೆ ದೊರಕಿಸಲ್ಪಟ್ಟೀತು ?[2] ೮. ನ್ಯಾಯಾಧಿಪತಿಯಿಂದ ಅಪರಾಧಿಯು ಕೇಳಲ್ಪಟ್ಟನು. ೯. ರಾಜನಿಂದ ಎಲ್ಲಾ ಪ್ರಜೆಗಳೂ ಮಕ್ಕಳಂತೆ ಕಾಪಾಡಲ್ಪಡುತ್ತಾರೆ. ೧೦. ಸಾಯಂಕಾಲ ಪೂರ್ವದಿಕ್ಕಿನಲ್ಲಿ ಚಂದ್ರನು ನೋಡಲ್ಪಟ್ಟನು. ೧೧. ಆ ಹುಡುಗಿಯಿಂದ ರಾಮಾಯಣವು ಓದಲ್ಪಟ್ಟಿತು. ೧೨. ನನ್ನ ಎರಡು ಕಣ್ಣುಗಳು ವೈದ್ಯನಿಂದ ಪರೀಕ್ಷಿಸಲ್ಪಟ್ಟವು.[3] ೧೩. ಉದ್ಯಾನವನದಲ್ಲಿ ಸಂಚರಿಸುತ್ತಿದ್ದ ಶಕುಂತಲೆಯು ದುಷ್ಯಂತನಿಂದ ನೋಡಲ್ಪಟ್ಟಳು. ೧೪. ಕರ್ಣಾಟಕದಲ್ಲಿರುವ ಅನೇಕ ದೇವಸ್ಥಾನಗಳು ಜಕಣಾಚಾರಿಯಿಂದ ಕಟ್ಟಲ್ಪಟ್ಟವು.[4] ೧೫. ಯುಗಾದಿ ಹಬ್ಬದಲ್ಲಿ ಅವರಿಂದ ಹೊಸ ಬಟ್ಟೆಗಳು ಧರಿಸಲ್ಪಟ್ಟವು. ೧೬. ಕಾಳಿದಾಸನಿಂದ ಮೂರು ನಾಟಕಗಳು ರಚಿಸಲ್ಪಟ್ಟವು.

ಮಿಶ್ರೋದಾಹರಣೆಗಳು

अभ्यासः ३३.

कर्णाटभाषया परिवर्तयत—

एकस्यामटव्यां कश्चन व्याघ्रः मृगान् भक्षयन् अवर्तत। एकदा सः वन्यं महिषं हत्वा अभक्षयत्। एकं अस्थिशकलं व्याघ्रस्य दन्तान्तरे अलगत्। तेन तस्य महती वेदना समजायत। तदा स व्याघ्रः "अहो! कथमिदमस्थि निर्गमयेयम्?

---

[1] कन्दाश्च [2] लभ्येत [3] परीक्षिते [4] निरमीयन्त-निर्मिताः

कथं जीवेयम्" इति चिन्तयन् इतस्ततः अटितवान्। तेन च वृक्षस्य शाखायामुपविष्टः कोऽपि काकः अदृश्यत। व्याघ्रेण सः एवं प्रार्थितः "भोः काक, अहमीदृशीमवस्थां प्राप्तः। मम मुखादिदमस्थिशकलं कृपया निष्कासय। तुभ्यमहमनल्पं मांसं यच्छामि। एतावन्तमुपकारं कर्तुमर्हसि" इति। काकश्च तस्य मुखं प्रविश्य तत्र लग्नं तदस्थि चञ्च्वा निरकासयत्। ततश्च "भोः व्याघ्र, त्वया प्रतिज्ञातं मांसमिदानीं मे यच्छ" इत्ययाचत। व्याघ्रस्तु अनादरेणावदत् "रे काक, मम मुखं प्रविष्टं त्वामभक्षयन् कृपया मुक्तवानहम्। किमयं महान् नोपकारः? तेनापि अतृप्तः सन् किं मांसं याचसे? शीघ्रमेव तूष्णीमपसर" इति। एवमापदि कृतमुपकारं संपदि विस्मरन्ति खलाः।

अभ्यासः ३४.

महाकविवाक्यानि

कर्णाटभाषया परिवर्तयत—

१. सूत! सुदूरममुना सारङ्गेण वयमाकृष्टाः। २. कथमयं स भगवान् कण्वः? ३. राजन्, अत्रैव मुहूर्तं तिष्ठ। ४. नूनं यूयमनेन कर्मणा परिश्रान्ताः। ५. किमपि हृदये कृत्वा अन्यत् किमपि जल्पसि। ६. गुणाः खलु अनुरागस्य कारणम्, न बलात्कारः। ७. वक्तुं सुकरम्, दुष्करं कर्तुम्। ८. किं गते सलिले सेतुबन्धेन? ९. किं कृते विवाहे नक्षत्रपरीक्षया?

१०. किं त्वं स्वयं नष्टः परान्नाशयितुमिच्छसि ? ११. संप्रत्येव वसिष्ठेन कौसल्यायाः सकाशमरुन्धती प्रेषिता। १२. स्मरति वा तं प्रदेशं भवान् ? १३. अयि, कथं विस्मरामि ? १४. दौवारिक! त्वरितं प्रवेशय तम्। १५. मूले छिन्ने कुतः पुष्पम् ? १६. न हि जगति मशको मातङ्गस्य प्रतिस्पर्धी भवति। १७. एकाकिनीं मामत्र विहाय न ते गमनं युक्तम्। १८. न सर्वदा सर्वस्य सदृशो दशापाकः। १९. बद्धो वाससि ग्रन्थिः। २०. अलमतिविस्तरेण।

अभ्यासः ३५.

सुभाषितानि

कर्णाटभाषया परिवर्तयत—

विद्याविनयसंपन्ने ब्राह्मणे गवि हस्तिनि।
शुनि चैव श्वपाके च पण्डिताः समदर्शिनः ॥ १ ॥

आचार्यात् पादमादत्ते पादं शिष्यः स्वमेधया।
कालेन पादमादत्ते पादं सब्रह्मचारिभिः ॥ २ ॥

शुभेन कर्मणा सौख्यं दुःखं पापेन कर्मणा।
कृतं फलति सर्वत्र नाकृतं भुज्यते क्वचित् ॥ ३ ॥

भक्तानामनुरक्तानामाश्रितानाञ्च रक्षिता।
दयावान् सर्वभूतेषु परत्र सुखमेधते ॥ ४ ॥

गावो लक्ष्म्याः सदा मूलं गोषु पाप्मा न विद्यते ।
पूजनीयाः सदा गावो देवानामपि देवताः ॥ ५ ॥

प्रियवाक्यप्रदानेन सर्वे तुष्यन्ति जन्तवः ।
तस्मात्तदेव वक्तव्यं वचने का दरिद्रता ॥ ६ ॥

निमेषमात्रमपि ते वयो गच्छन्न तिष्ठति ।
तस्माद्देहेष्वनित्येषु कीर्तिमेकामुपार्जयेत् ॥ ७ ॥

अद्भिः शुध्यन्ति गात्राणि बुद्धिर्ज्ञानेन शुध्यति ।
अहिंसया च भूतात्मा मनः सत्येन शुध्यति ॥ ८ ॥

उपकारिषु यः साधुः साधुत्वे तस्य को गुणः ।
अपकारिषु यः साधुः स साधुरिति कीर्तितः ॥ ९ ॥

श्रान्तमध्वनि तिष्ठन्तं वृद्धमर्हमुपस्थितम् ।
अर्चयेद्भूतिमन्विच्छन् गृहस्थो गृहमागतम् ॥ १० ॥

सुखमापतितं सेव्यं दुःखमापतितं तथा ।
चक्रवत् परिवर्तन्ते दुःखानि च सुखानि च ॥ ११ ॥

चिन्तनीया हि विपदामादावेव प्रतिक्रिया ।
न कूपखननं युक्तं प्रदीप्ते वह्निना गृहे ॥ १२ ॥

परोपदेशे पाण्डित्यं सर्वेषां सुकरं नृणाम् ।
धर्मे स्वीयमनुष्ठानं कस्यचित्तु महात्मनः ॥ १३ ॥

अयं निजः परो वेति गणना लघुचेतसाम् ।
उदारचरितानां तु वसुधैव कुटुम्बकम् ॥ १४ ॥

अल्पानामपि वस्तूनां संहतिः कार्यसाधिका ।
तृणैर्गुणत्वमापन्नैः बध्यन्ते मत्तदन्तिनः ॥ १५ ॥

For Copies apply to :—

(1) **THE AUTHOR**

(2) **Vidwan S. V. BHIMA BHATTA**
Sri Chamarajendra Sanskrit College
Bangalore-18.

(3) **Vidwan K. NARASIMHACHAR**
46, IV Main Road, Chamarajapet
Bangalore-18.

PRINTED AT PRABHA PRINTING HOUSE, BASAVANGUDI, BANGALORE-4.